ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಮೇ 23, 2023
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 09 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999



**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೈರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಮನೆಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ, 30x50 East ಕೆಳಗಡೆ, 2 ಬೆಡ್‌ರೂಂ ಮೇಲುಗಡೆ ಒಂದು ರೂಮ್ 18x45 South, 50 ಲಕ್ಷಕ್ಕೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟು, ಮನೆ ಮಾರಾಟಕ್ಕೆ, ಖರೀದಿಗೆ**
Commercial site B.T layout 30x40 (Corner), MCC `A' Block - 22x60, KHB - 40x60, Vinayaka - 30x30, Dollers Glass House Shiva-Parvathi Layout ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ. Veeresh
-76765 58585

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
SS ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**ಸೈಟ್ ಮಾರಾಟಕ್ಕೆ**
ಎಸ್.ಎಸ್. ಹಾಸ್ಪಿಟಲ್ ಹಿಂದೆ 30X38 (ಕಾರ್ನರ್) 30X40 ಉತ್ತರ ಜೆ.ಹೆಚ್. ಪಟೇಲ್ 20X30 ಪೂರ್ವ (24 ಲಕ್ಷ) KHB 20X30 (14 ಲಕ್ಷ) ಪೂರ್ವ.
ಕಿರಣ್ ಭೂಸನೂರ್ (ಏಜೆಂಟ್)
98440 63409, 97315 63409

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ ಡಬಲ್ ಬೆಡ್ ರೂಂ ಮನೆಗಳು ಆಫೀಸ್‌ಗೆ ಯೋಗ್ಯವಿರುವ ಮೂರು ಬೆಡ್ ರೂಂ ಮನೆ ಮೊದಲನೇ ಬಸ್ ಸ್ಟ್ಯಾಂಡ್ ಹತ್ತಿರ ಇಂಡಿಪೆಂಡೆಂಟ್ ಹೌಸ್, ವಿದ್ಯಾನಗರ ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ, ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಶಾಮನೂರಿನ ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ. 70x62 West, South Corner, 40x62 West, 40x30 South,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ**
First floor - 1, Single Bedroom House & 6 Rooms ಬಾಡಿಗೆಗೆ (ಸಿಂಗಲ್ ಬೆಡ್ ರೂಂ & ಮನೆ ಬಾಡಿಗೆಗೆ) ದೊರೆಯುತ್ತವೆ. ಸಂಪರ್ಕಿಸಿ :
98446 32426, 85499 92522

**ರೂಂ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್.ಲೇಔಟ್ 'ಬಿ' ಬ್ಲಾಕ್, 4ನೇ ಮೇನ್, 9ನೇ ಕ್ರಾಸ್‌ನಲ್ಲಿ, ಡೋರ್ ನಂ. 3654/41 ರೂಂ ಬಾಡಿಗೆಗೆ, ಆಸಕ್ತರು ಸಂಪರ್ಕಿಸಿ :
87628 24507, 63631 48942

**ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ**
ದಾವಣಗೆರೆಯ ವಿದ್ಯಾನಗರದಲ್ಲಿ ದೇವಸ್ಥಾನ ಹಾಗೂ ಬಸ್ ಸ್ಟ್ಯಾಪ್‌ಗೆ ಹತ್ತಿರವಿರುವ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ. ಸಂಪರ್ಕಿಸಿ :
96322 74557

**ಮನೆ ಬಾಡಿಗೆಗೆ**
ಎಂ.ಸಿ.ಸಿ. 'ಬಿ' ಬ್ಲಾಕ್, 9ನೇ ಮೇನ್‌ನಲ್ಲಿ, ದಾವಣಗೆರೆ ಹಾರ್ಟ್ ಆಸ್ಪತ್ರೆ ಹತ್ತಿರ, ಎರಡು ಬೆಡ್ ರೂಂ ಇರುವ ಮೊದಲನೆ ಮಹಡಿಯ ಮನೆ ಬಾಡಿಗೆಗೆ ಇದೆ. ಮುನ್ಸಿಪಲ್ ಮತ್ತು ಬೋರ್ ನೀರು ಸೌಲಭ್ಯವಿದೆ, ಸಸ್ಯಹಾರಿಗಳಿಗೆ ಮಾತ್ರ.
08192 220207

**ಮಾರಾಟಕ್ಕೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕೆ ಸಿಗುತ್ತವೆ, ವಿಚಾರಿಸಿ. ಬೆಳಕೇರಿ.
9731846014


# ಪೆಟ್ರೋಲ್ ಪಂಪ್‌ಗೆ 2,000 ರೂ. ನೋಟುಗಳ ದಾಳಿ!

ನವದೆಹಲಿ, ಮೇ 22 – ರಿಸರ್ವ್ ಬ್ಯಾಂಕ್ 2,000 ರೂ.ಗಳ ನೋಟುಗಳನ್ನು ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸುತ್ತಿರುವಂತೆಯೇ, ಈ ನೋಟುಗಳು ಪೆಟ್ರೋಲ್ ಪಂಪ್‌ಗಳಿಗೆ 'ದಾಳಿ' ಇಡುವ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ.

ಈ ನೋಟುಗಳನ್ನು ವಾಪಸ್ ಪಡೆಯುವುದಾಗಿ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿತ್ತು. ನಂತರದಲ್ಲಿ ಪೆಟ್ರೋಲ್ ಪಂಪ್‌ಗಳಿಗೆ ಬರುವ ಗ್ರಾಹಕರು ಹೆಚ್ಚಿನ ಪ್ರಮಾಣದಲ್ಲಿ ಈ ನೋಟುಗಳನ್ನು ತರುತ್ತಿದ್ದಾರೆ.

ಗ್ರಾಹಕರು ಕೇವಲ 100-200 ರೂ. ಪೆಟ್ರೋಲ್ ಹಾಕಿಸಲಿಕ್ಕೂ 2,000 ರೂ.ಗಳ ನೋಟುಗಳನ್ನು ನೀಡುತ್ತಿದ್ದಾರೆ. ಇದರಿಂದಾಗಿ ದೇಶಾದ್ಯಂತ ಇರುವ ಪೆಟ್ರೋಲ್ ಪಂಪ್‌ಗಳಲ್ಲಿ ಚಿಲ್ಲರೆ ಕೊರತೆಯಾಗಿದೆ ಎಂದು ಅಖಿಲ ಭಾರತ ಪೆಟ್ರೋಲ್ ಡೀಲರ್‌ಗಳ ಒಕ್ಕೂಟದ ಅಧ್ಯಕ್ಷ ಅಜಯ್ ಬನ್ಸಾಲ್ ತಿಳಿಸಿದ್ದಾರೆ.

2,000 ರೂ.ಗಳ ನೋಟುಗಳನ್ನು ವಾಪಸ್ ಪಡೆಯುವುದಕ್ಕೆ ಮುಂಚೆ ಒಟ್ಟು ನಗದು ವ್ಯಾಪಾರದ ಶೇ.10ರಷ್ಟು ಮಾತ್ರ 2,000 ರೂ.ಗಳ ನೋಟುಗಳಲ್ಲಿ ಇರುತ್ತಿತ್ತು. ಈಗ ಶೇ.90ರವರೆಗಿನ ನಗದು 2,000 ರೂ. ನೋಟುಗಳದ್ದಾಗಿದೆ. ನಾವು ಈ ಹಣವನ್ನು ಪ್ರತಿನಿತ್ಯ ಬ್ಯಾಂಕುಗಳಿಗೆ ಜಮಾ ಮಾಡುವ ಪರಿಸ್ಥಿತಿ ಬರುತ್ತಿದೆ ಎಂದವರು ಹೇಳಿದ್ದಾರೆ.



**ಡಿಜಿಟಲ್ ಪಾವತಿ ಇಳಿಕೆ, ನೋಟಿನ ಪ್ರಮಾಣ ಏರಿಕೆ**

ಈ ಹಿಂದೆ 2016ರಲ್ಲಿ ನೋಟು ರದ್ದತಿ ಮಾಡಿದ ಸಂದರ್ಭದಲ್ಲಿ ರದ್ದಾದ ನೋಟುಗಳನ್ನು ಪೆಟ್ರೋಲ್ ಪಂಪ್‌ಗಳಲ್ಲಿ ಬಳಸಲು ಅನುಮತಿ ನೀಡಲಾಗಿತ್ತು. ನಂತರ ಪೆಟ್ರೋಲ್ ಪಂಪ್‌ಗಳಲ್ಲಿ ನೋಟುಗಳ ಬಳಕೆ ಪ್ರಮಾಣ ಅತಿಯಾಗಿ ಹೆಚ್ಚಾಗಿತ್ತು. ಪೆಟ್ರೋಲ್ ಪಂಪ್‌ಗಳು ನಿಷೇಧಿತ ನೋಟುಗಳನ್ನು ಜಮಾ ಮಾಡುವ ತಾಣಗಳಾಗಿ ಪರಿವರ್ತನೆಯಾಗಿದ್ದವು. ನಂತರ ಸರ್ಕಾರ ಈ ಸೌಲಭ್ಯವನ್ನು ವಾಪಸ್ ಪಡೆದಿತ್ತು. ಈ ಬಾರಿಯೂ 2,000 ನೋಟುಗಳು ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲ್ ಪಂಪ್‌ಗಳಿಗೆ ಬರುತ್ತಿವೆ.

ಪೆಟ್ರೋಲ್ ಪಂಪ್‌ಗಳಿಗೆ 2,000 ರೂ.ಗಳ ನೋಟುಗಳು ಹೆಚ್ಚಾಗಿ ಬರುತ್ತಿವೆ. ಇವುಗಳನ್ನು ಬ್ಯಾಂಕುಗಳಿಗೆ ಜಮಾ ಮಾಡುವ ಮೂಲಕ ಸಣ್ಣ ಮೊತ್ತದ ನೋಟುಗಳನ್ನು ಪಡೆಯಬೇಕಿದೆ. ಈ ಪ್ರಕ್ರಿಯೆ ಸುಲಲಿತಗೊಳಿಸಲು ರಿಸರ್ವ್ ಬ್ಯಾಂಕ್ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ಬನ್ಸಾಲ್ ಹೇಳಿದ್ದಾರೆ.

ಈ ಹಿಂದೆ ನೋಟು ಅಮಾನ್ಯೀಕರಣವಾದಾಗ ಪೆಟ್ರೋಲ್ ಪಂಪ್‌ಗಳಿಗೆ ಅತಿ ಹೆಚ್ಚಿನ ರದ್ದಾದ ನೋಟುಗಳು ಬಂದಿದ್ದವು. ಆಗ ಪೆಟ್ರೋಲ್ ಪಂಪ್ ಮಾಲೀಕರಿಗೆ ಅಕಾರಣವಾಗಿ ಆದಾಯ ತೆರಿಗೆ ನೋಟಿಸ್ ಬಂದಿದ್ದವು. ಈ ಬಾರಿಯೂ ಅದೇ ಪರಿಸ್ಥಿತಿ ಆಗಬಾರದು ಎಂದವರು ಹೇಳಿದ್ದಾರೆ.

ಈ ಹಿಂದೆ ಪೆಟ್ರೋಲ್ ಪಂಪ್‌ಗಳ ಶೇ.40ರಷ್ಟು ಮಾರಾಟ ಡಿಜಿಟಲ್ ಪಾವತಿ ಮೂಲಕ ನಡೆಯುತ್ತಿತ್ತು. ಈಗ ಅದು ಹಠಾತ್ತನೆ ಶೇ.10ಕ್ಕೆ ಇಳಿದಿದೆ. ನಗದು ರೂಪದಲ್ಲಿ ಪೆಟ್ರೋಲ್ ಮಾರಾಟ ಗಣನೀಯವಾಗಿ ಹೆಚ್ಚಾಗಿದೆ. ಇದೆಲ್ಲವೂ ಆದಾಯ ತೆರಿಗೆ ಅಧಿಕಾರಿಗಳಿಂದ ಸಮಸ್ಯೆಗೆ ಕಾರಣವಾಗಬಹುದು ಎಂದವರು ಹೇಳಿದ್ದಾರೆ.

## ದಾವಣಗೆರೆ ಬಂಕ್‌ಗಳಲ್ಲಿ ಗ್ರಾಹಕ - ಸಿಬ್ಬಂದಿಗಳ ನಡುವೆ ವಾಗ್ವಾದ

ದಾವಣಗೆರೆ, ಮೇ 20- ಸರ್ಕಾರ 2 ಸಾವಿರ ರೂ. ಮುಖಬೆಲೆಯ ನೋಟು ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸಿದ್ದು, ಗ್ರಾಹಕರು ತಮ್ಮ ಬಳಿಯ ನೋಟುಗಳನ್ನು ಪೆಟ್ರೋಲ್ ಬಂಕ್‌ಗಳಿಗೆ ಹೆಚ್ಚಾಗಿ ನೀಡಲು ಆರಂಭಿಸಿದ್ದಾರೆ.

ತಮ್ಮ ವಾಹನಗಳಿಗೆ 200-300 ರೂ. ಬೆಲೆಯ ಪೆಟ್ರೋಲ್ ಹಾಕಿಸಿಕೊಂಡು 2 ಸಾವಿರ ರೂ. ನೋಟುಕೊಟ್ಟು ಚಿಲ್ಲರೆ ಕೊಡುವಂತೆ ಹೇಳುತ್ತಿದ್ದಾರೆ. ಇದು ಬಂಕ್ ಸಿಬ್ಬಂದಿಗಳಿಗೆ ಕಿರಿ ಕಿರಿ ಎನಿಸಿದೆ. ಈ ಬಗ್ಗೆ ಸಿಬ್ಬಂದಿಗಳು ಹಾಗೂ ಗ್ರಾಹಕರ ನಡುವೆ ಮಾತಿನ ಚಕಮಕಿಗಳೂ ನಡೆಯುತ್ತಿವೆ.

ಬಂಕ್ ಸಿಬ್ಬಂದಿಗಳಿಗೆ ಚಿಲ್ಲರೆ ಕೊರತೆ ಒಂದು ಸಮಸ್ಯೆಯಾದರೆ, ಗ್ರಾಹಕರಿಂದ ಪಡೆದ ಹೆಚ್ಚು ಸಂಖ್ಯೆಯ ಎರಡು ಸಾವಿರ ರೂಪಾಯಿ ನೋಟುಗಳನ್ನು ಜಮಾ ಮಾಡಿದರೆ ಮುಂದೆ ತೊಂದರೆಯಾಗಬಹುದೆಂಬ ಭಯವೂ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾವು 2 ಸಾವಿರ ರೂ.ಬೆಲೆಯ ನೋಟುಗಳನ್ನು ಪಡೆಯುತ್ತಿಲ್ಲ ಎಂದು ಬಂಕ್ ಸಿಬ್ಬಂದಿಯೊಬ್ಬರು ಹೇಳಿದರು.


**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ**
ಪುರುಷ ಅಭ್ಯರ್ಥಿ
98860 97065

**ಸೈಟು ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯ ಪೂರ್ವ ದಿಕ್ಕಿನ 40x50 ಅಳತೆಯ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ :
78998 38164
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ದಾಟಿ ಹಳೆ ಬನಶಂಕರಿ ಲೇಔಟ್‌ನಲ್ಲಿ, ಹೊಸ ಬನಶಂಕರಿ ಲೇಔಟ್‌ನಲ್ಲಿ 50x80 North, 80x45 East, 40x43 East, 30x50 West,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Teachers with B.Com / B.Sc & Fluent in English to Teach in Davanagere School.
98448 35527, 88809 87079

**ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಮತ್ತು ಡಾಲರ್ಸ್ ಲೇಔಟ್ ಮಧ್ಯ ಪೂರ್ವ 30x40, ಪಶ್ಚಿಮ 30x45, ಹಳೆ ಬನಶಂಕರಿ ಬಡಾವಣೆ ಪೂರ್ವ 40x40, ಪಶ್ಚಿಮ 30x45, 40x78 (ಅಕ್ಕ-ಪಕ್ಕ) (60 ಅಡಿ ರಸ್ತೆ) ಶಿವ-ಪಾರ್ವತಿ ಬಡಾವಣೆ ಪೂರ್ವ 30x35, 40x60.
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಹೊರವಲಯದ ಕುಂದುವಾಡ ಹತ್ತಿರ ಇರುವ ತುಂಗಭದ್ರಾ ಬಡಾವಣೆಯಲ್ಲಿ 20x30 ಅಳತೆಯ, ಉತ್ತರ ಮುಖವುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
97416 84666, 82177 98233

**ಬೇಕಾಗಿದ್ದಾರೆ**
ಇನ್ಶೂರೆನ್ಸ್ ಆಫೀಸ್‌ನಲ್ಲಿ ಆಫೀಸ್ ಬಾಯ್ ಕೆಲಸಕ್ಕೆ ಎಸ್.ಎಸ್.ಎಲ್.ಸಿ. ಉತ್ತೀರ್ಣ ಹೊಂದಿರುವ ಯುವಕ ಬೇಕಾಗಿದ್ದಾನೆ. ಸಮಯ ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ.
9902120508, 8310981698

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಐಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710


**CHANGE OF NAME**

I, NIKHIL S. OSWAL S/o SUNIL KUMAR G. OSWAL, aged about 21 years, R/o #220/1, Bhagyashree, 2nd Main, 3rd Cross, P.J. Extn., Davangere-02, That I am to state the both names viz, NIKHIL S. OSWAL S/o SUNIL KUMAR G. OSWAL, NIKHIL S. OSWAL S/o SUNIL KUMAR GYANCHAND OSWAL & NIKHIL S/o SUNILKUMAR GYANCHAND OSWAL were referred to me only and to non-else. This affidavit is required to submit before the concerned authorities, vide affidavit dated 12.08.2022 sworn before Notary M. PRATHAPARUDRA, Davangere. Henceforth all transactions & dealings will be in correct name NIKHIL S. OSWAL.


**ಕಾರುಗಳು ಮಾರಾಟಕ್ಕಿವೆ**
RENAULT DUSTER 2019
MARUTHI WAGON-R 2018, MAHINDRA TUV300 T8 2018
DAIVIK IYNAHALLI
99456 43223

**ತಕ್ಷಣ ಬೇಕಾಗಿದ್ದಾರೆ**
5th, 7th, 9th,10th, PUC, Degree ITI, Diploma ಯುವಕ-ಯುವತಿಯರು ಆಫೀಸ್‌ಗಳಿಗೆ, ಶೋ ರೂಂಗಳಿಗೆ, ಬಿಗ್ ಬಜಾರ್ ಕಂಪನಿಗಳಿಗೆ ನೇರ ನೇಮಕಾತಿ ಸಂಬಳ 16,500/-, 60,000/- ವಸತಿ, ಊಟವಿದೆ.
96862 20858

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, 3 ಬೆಡ್ ರೂಮ್ ಉತ್ತರ ದಿಕ್ಕಿನ ಸುಸಜ್ಜಿತ ಮೊದಲನೇ ಮಹಡಿಯ ಮನೆ ಬಾಡಿಗೆಗೆ ಇದೆ, ಬೋರ್ ವೆಲ್ & ಕಾರ್ಪೊರೇಷನ್ ನೀರಿನ ಸೌಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ :
97391 19921, 99026 88442

**WANTED TEACHERS**
Kids Campus International Pre school Davangere
Wanted : Teachers for playgroup, Pre-kg, Lkg and Ukg
Fluency in English
99003 78196

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಹೈಟೆಕ್ ಬಳಿ 30x50 ಅಳತೆಯ ಸೈಟುಗಳು ಮಾರಾಟಕ್ಕಿವೆ.
72045 77823


# ಬಿರುಗಾಳಿ ಸಹಿತ ಮಳೆ: ತೋಟಗಾರಿಕೆ ಬೆಳೆ ಹಾನಿ; ಸಿಡಿಲು ಬಡಿದು ಎತ್ತು ಸಾವು





ಜಗಳೂರು, ಮೇ 22- ತಾಲ್ಲೂಕಿನಾದ್ಯಂತ ನಿನ್ನೆ ಸಂಜೆ, ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ವ್ಯಾಪಕ ಪ್ರಮಾಣದ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿ ರೈತರಿಗೆ ಸಾಕಷ್ಟು ನಷ್ಟ ಉಂಟಾಗಿದೆ.

ತಹಶೀಲ್ದಾರ್ ಜಿ.ಸಂತೋಷ್‌ಕುಮಾರ್ ನೇತೃತ್ವದ ಅಧಿಕಾರಿಗಳು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದು, ಅಂದಾಜು 20 ಲಕ್ಷ ರೂ ಗಿಂತ ಹೆಚ್ಚು ನಷ್ಟ ಸಂಭವಿಸಿದೆ ಎಂದು ವರದಿಯಾಗಿದೆ.

ಕಸಬಾ ಹೋಬಳಿಯಲ್ಲಿ 9 ಮನೆಗಳಿಗೆ ಹಾನಿಯಾಗಿದೆ. ಎರಡು ಹೆಕ್ಟೇರ್ ಅಡಿಕೆ ಬೆಳೆ ನಾಶವಾಗಿದೆ. ಬಿಳಿಚೋಡು ಹೋಬಳಿಯಲ್ಲಿ ಬಾಳೆ 2 ಹೆಕ್ಟೇರ್, ಪಪ್ಪಾಯ 1 ಹೆಕ್ಟೇರ್, 2 ಮನೆಗಳಿಗೆ ಹಾನಿಯಾಗಿದೆ. ಸೊಕ್ಕೆ ಹೋಬಳಿಯಲ್ಲಿ ಅಡಿಕೆ 2 ಹೆಕ್ಟೇರ್, ಬಾಳೆ 5 ಹೆಕ್ಟೇರ್, ಪಪ್ಪಾಯ ಹತ್ತು ಹೆಕ್ಟೇರ್ ನಾಶವಾಗಿದೆ.

**ಸಿಡಿಲು ಬಡಿದು ಎತ್ತು ಸಾವು;** ತಾಲ್ಲೂಕಿನ ಚಿಕ್ಕ ಉಜ್ಜಿನಿ ಗ್ರಾಮದ ಚಂದ್ರಶೇಖರ್ ಸ್ವಾಮಿ ಎಂಬ ರೈತನ ಎತ್ತು ಸಿಡಿಲು ಬಡಿದು ಮೃತಪಟ್ಟಿದೆ ಎಂದು ತಹಶೀಲ್ದಾರ್ ಜಿ. ಸಂತೋಷ್‌ಕುಮಾರ್ ಮಾಹಿತಿ ನೀಡಿದ್ದಾರೆ.

**ತೋಟಗಾರಿಕೆ ಇಲಾಖೆ ಅಧಿಕಾರಿಗಳ ಭೇಟಿ:** ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ವಿಶ್ವನಾಥ್, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ವೆಂಕಟೇಶ್‌ಮೂರ್ತಿ, ಸಹಾಯಕ ತೋಟಗಾರಿಕೆ ಅಧಿಕಾರಿ ವೆಂಕಟೇಶ್ ನಾಯ್ಕ್ ನೇತೃತ್ವದ ತಂಡ ತಾಲ್ಲೂಕಿನ ಮಠದ ದ್ಯಾಮೇನಹಳ್ಳಿ ಗ್ರಾಮದ ಎಂ.ಪಿ.ತಿಪ್ಪೇಸ್ವಾಮಿ ಸೇರಿದಂತೆ, ನಷ್ಟ ಅನುಭವಿಸುತ್ತಿರುವ ರೈತರ ತೋಟಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

**ಜಗಳೂರು**

ರೈತ ಎಂ.ಪಿ.ತಿಪ್ಪೇಸ್ವಾಮಿ ಮಳೆಯಿಂದ ಆದ ನಷ್ಟದ ಬಗ್ಗೆ ವಿವರಿಸಿದರು. ಕಷ್ಟಪಟ್ಟು ಬೆಳೆದ ಬಾಳೆ ಬಿರುಗಾಳಿಗೆ ತರಗೆಲೆಯಂತೆ ನೆಲಕ್ಕೆ ಅಪ್ಪಳಿಸಿದೆ. ಅಕಾಲಿಕ ಮಳೆಯಿಂದ ಆದ ನಷ್ಟ ಹೇಳತೀರದಾಗಿದೆ. ಇಲಾಖೆ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ಸೊಕ್ಕೆ, ಗುರುಸಿದ್ದಾಪುರ, ಮಲೆ ಮಾಚಿಕೆರೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮಳೆಯಿಂದ ಆದ ನಷ್ಟದ ಬಗ್ಗೆ ಅಧಿಕಾರಿಗಳು ಮಾಹಿತಿ ಪಡೆದರು.

## ಈಚಘಟ್ಟ ಕೃಷಿ ಸಹಕಾರ ಸಂಘಕ್ಕೆ ಆಯ್ಕೆ





ದಾವಣಗೆರೆ, ಮೇ 22- ತಾಲ್ಲೂಕಿನ ಈಚಘಟ್ಟದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಎ.ಎಸ್. ನಯನಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಮೇಘರಾಜ್ ಬಿ. ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಭಾಗ್ಯಶ್ರೀ ಎಸ್. ಪಾಟೀಲ್ ತಿಳಿಸಿದ್ದಾರೆ.

## ಗೋ ಫಸ್ಟ್ ದಿವಾಳಿಗೆ ಎನ್.ಸಿ.ಎಲ್.ಎ.ಟಿ. ಅನುಮತಿ

ನವದೆಹಲಿ, ಮೇ 22 – ಸಂಕಷ್ಟಕ್ಕೆ ಸಿಲುಕಿರುವ ಗೋ ಫಸ್ಟ್ ವಿಮಾನಯಾನ ಸಂಸ್ಥೆ ದಿವಾಳಿ ಪ್ರಕ್ರಿಯೆಗೆ ಒಳಗಾಗುವ ಆದೇಶವನ್ನು ರಾಷ್ಟ್ರೀಯ ಕಂಪನಿಗಳ ಕಾನೂನು ಮೇಲ್ಮನವಿ ನ್ಯಾಯಾಧೀಕರಣ (ಎನ್.ಸಿ.ಎಲ್.ಎ.ಟಿ.) ಎತ್ತಿ ಹಿಡಿದಿದೆ.


ಕಂಪನಿ ದಿವಾಳಿ ಪ್ರಕ್ರಿಯೆಗೆ ಒಳಪಡಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧೀಕರಣ (ಎನ್.ಸಿ.ಎಲ್.ಟಿ.) ಅನುಮತಿ ನೀಡಿತ್ತು. ಇದನ್ನು ಪ್ರಶ್ನಿಸಿ ವಿಮಾನಯಾನ ಸಂಸ್ಥೆಗೆ ಸಾಲ ನೀಡಿದವರು ಎನ್.ಸಿ.ಎಲ್.ಎ.ಟಿ. ಮೊರೆ ಹೋಗಿದ್ದರು. ಆದರೆ, ಆದೇಶವನ್ನು ಎತ್ತಿ ಹಿಡಿದಿರುವ ಎನ್.ಸಿ.ಎಲ್.ಎ.ಟಿ., ಈ ಕುರಿತ ಯಾವುದೇ ಪರಿಹಾರಕ್ಕಾಗಿ ಎನ್.ಸಿ.ಎಲ್.ಟಿ. ಬಳಿ ಹೋಗುವಂತೆ ತಿಳಿಸಿದೆ.

ವಾಡಿಯಾ ಸಮೂಹಕ್ಕೆ ಸೇರಿದ ಗೋ ಫಸ್ಟ್ ವಿಮಾನಯಾನ ಸಂಸ್ಥೆಗೆ ನಾಲ್ಕು ಕಂಪನಿಗಳು 22 ವಿಮಾನಗಳನ್ನು ಬಾಡಿಗೆಗೆ ನೀಡಿವೆ. ದಿವಾಳಿ ಪ್ರಕ್ರಿಯೆ ಪ್ರಶ್ನಿಸಿ ಈ ಕಂಪನಿಗಳಾದ ಎಸ್.ಎಂ.ಬಿ.ಸಿ. ಏವಿಯೇಷನ್ ಕ್ಯಾಪಿಟಲ್ ಲಿಮಿಟೆಡ್, ಜಿ.ವೈ. ಏವಿಯೇಷನ್, ಎಸ್.ಎಫ್.ವಿ. ಏರ್‌ಕ್ರಾಫ್ಟ್ ಹಾಗೂ ಇಂಜಿನ್ ಲೀಸಿಂಗ್ ಫೈನಾನ್ಸ್ ಬಿ.ವಿ. ಮೇಲ್ಮನವಿ ಸಲ್ಲಿಸಿದ್ದವು.

## ನಗರ, ಗ್ರಾಮೀಣ ಭಾಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಿದ್ಯಾನಗರ, ರಂಗನಾಥ ಬಡಾವಣೆ, ತರಳಬಾಳು ಬಡಾವಣೆ, ಸರಸ್ವತಿ ನಗರ, ಶಿವಕುಮಾರಸ್ವಾಮಿ ಬಡಾವಣೆ, ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ಲೋಕಿಕೆರೆ ರಸ್ತೆ ಇಂಡಸ್ಟ್ರಿಯಲ್ ಏರಿಯಾ, ಎಸ್.ಎಸ್. ಹೈಟೆಕ್ ಆಸ್ಪತ್ರೆ, ರಾಮ ನಗರ, ವಿವೇಕಾನಂದ ಬಡಾವಣೆ, ಆಂಜನೇಯ ಬಡಾವಣೆ, ಶಾಮನೂರು, ಜೆ.ಹೆಚ್. ಪಟೇಲ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಗ್ರಾಮೀಣ ಭಾಗದ 6ನೇ ಮೈಲಿ, ತೋಳಹುಣಸೆ, ಬೆಳವನೂರು, ನಾಗನೂರು, ತುರ್ಚಗಟ್ಟ, ಯಲ್ಲಮ್ಮ ಮಿಲ್, ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೆಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


## ಜಗಳೂರು ಬಳಿಯ ರಸ್ತೆ ಅಪಘಾತದಲ್ಲಿ ಡಿಡಿಸಿಸಿ ಬ್ಯಾಂಕಿನ ಹಾಲಸ್ವಾಮಿ ನಿಧನ



ಜಗಳೂರು, ಮೇ 22- ತಾಲ್ಲೂಕಿನ ಉದ್ದಗಟ್ಟ ಕ್ರಾಸ್ ಬಳಿ ಆಪೆ ಆಟೋ ಹಾಗೂ ಬೈಕ್ ನಡುವೆ ಇಂದು ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಇಲ್ಲಿನ ಡಿಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿ ಹಾಲಸ್ವಾಮಿ (51) ಮೃತಪಟ್ಟಿದ್ದಾರೆ. ತಾಲ್ಲೂಕಿನ ಹಿರೇಮಲ್ಲನಹೊಳೆ ಗ್ರಾಮದ ಹಾಲಸ್ವಾಮಿ, ಕೆಲಸ ಮುಗಿಸಿಕೊಂಡು ರಾತ್ರಿ ಜಗಳೂರಿನಿಂದ ಹಿರೇಮಲ್ಲನಹೊಳೆಗೆ ಹೊರಟಿದ್ದಾಗ ಉದ್ದಗಟ್ಟ ಕ್ರಾಸ್ ಬಳಿ ಬೈಕ್ ಮತ್ತು ಆಪೆ ಆಟೋ ನಡುವೆ ನಡೆದ ಭೀಕರ ಅಪಘಾತದಲ್ಲಿ ತಲೆ ಭಾಗ ಸೀಳಿ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಈ ಸಂಬಂಧ ಜಗಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.


**3ನೇ ವರ್ಷದ ಪುಣ್ಯಸ್ಮರಣೆ**



ರಾಷ್ಟ್ರ ಪ್ರಶಸ್ತಿ ವಿಜೇತರಾದ
**ಬಾಡಾದ ಸಾಧಿಕ್ ಬಿ.ಬಾಷಾ ಸಾಬ್**
ನಿಧನ : 23.05.2020
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಪುತ್ರ : ಬಿ. ಮೊಹಮ್ಮದ್ ರಫೀಕ್, SSIMS & RC ಸಿಬ್ಬಂದಿ.
ಹಾಗೂ ಬಂಧು-ಮಿತ್ರರು. ದಾವಣಗೆರೆ.

ಶ್ರೀ ವೀರಭದ್ರೇಶ್ವರ ಪ್ರಸನ್ನ

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**




ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ ದಿ. ಜಿ.ವಿ. ಸುಲೋಚನಮ್ಮ ಮತ್ತು ದಿ. ಜಿ. ವಿಶ್ವನಾಥಯ್ಯನವರ ಪುತ್ರ
**ಭಾನುಪ್ರಕಾಶ್**
ಇವರು ದಿನಾಂಕ 20.5.2023 ರಂದು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ತತ್ಸಂಬಂಧವಾದ **ಕೈಲಾಸ ಸಮಾರಾಧನೆಯನ್ನು** ದಿನಾಂಕ 24.05.23 ನೇ ಬುಧವಾರ ಬೆಳಿಗ್ಗೆ 11ಕ್ಕೆ ಮೃತರ ಸ್ವಗೃಹ ಎಂ.ಸಿ.ಸಿ. 'ಎ'ಬ್ಲಾಕ್ ನಂ. 2381/1, 10ನೇ ಮುಖ್ಯ ರಸ್ತೆ, 10ನೇ ಅಡ್ಡ ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಮೊ.ನಂ. 77600 16764, 98444 58669
ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

|| ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ಜನನ 01.11.1936



ಮರಣ 13.05.2023

ಶ್ರೀಮತಿ ಯಶೋಧರಾ ಲಿಂ. ಡಾ. ಕೆ.ಜಿ. ಗುರುಮೂರ್ತಿ
13ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 13.5.2023ನೇ ಶನಿವಾರ ಸಂಜೆ 6.45ಕ್ಕೆ ನನ್ನ ಪೂಜ್ಯ ಪತಿಯವರಾದ
**ಡಾ. ಕೆ.ಜಿ. ಗುರುಮೂರ್ತಿ**
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಶಿವಗಣಾರಾಧನೆ**ಯನ್ನು ದಿನಾಂಕ 23.5.2023ನೇ ಮಂಗಳವಾರ ಬೆಳಿಗ್ಗೆ 11ಕ್ಕೆ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನ, ಹದಡಿ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
- : ದುಃಖತಪ್ತರು : -
ಕಂದಗಲ್ ಗೌಡ್ರ ವಂಶಸ್ಥರು ಮತ್ತು ಬಂಧು-ಬಳಗ
ಶ್ರೀಮತಿ ಯಶೋಧರಾ ಲಿಂ. ಡಾ. ಕೆ.ಜಿ. ಗುರುಮೂರ್ತಿ ಮತ್ತು
ಮಕ್ಕಳಾದ : ಶ್ರೀಮತಿ ಡಾ. ರೇಣುಕಾ, ಶ್ರೀ ಸಂಜಯ್ ಕುಲಕರ್ಣಿ ಮತ್ತು ಮಕ್ಕಳು.
ಶ್ರೀಮತಿ ವಿದ್ಯುಲತಾ, ಶ್ರೀ ರಾಜಶೇಖರ್ ಬೆಟ್‌ಕೆರೂರು ಮತ್ತು ಮಕ್ಕಳು
ಕರಿಗೌಡ್ರ ಕುಟುಂಬ ವರ್ಗ ಧಾರಾವಾಡ ಹಾಗೂ ಬಂಧು-ಮಿತ್ರರು.
ಮೊ : 98457 45622
ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಕಂದನಕೋವಿ ರಾಜಶೇಖರಪ್ಪ ನಿಧನ**



ದಾವಣಗೆರೆ ತಾಲ್ಲೂಕು ಕಂದನಕೋವಿ ಗ್ರಾಮದ ನಿಟುವಳ್ಳಿ ವಾಸಿ
**ಕಂದನಕೋವಿ ಯಾಜಮಾನ್ ಬೆಳ್ಳೂಡಿ ಕೆ.ಬಿ.ರಾಜಶೇಖರಪ್ಪ**
ಇವರು ದಿನಾಂಕ 22.5.2023ರ ಸೋಮವಾರ ಮಧ್ಯಾಹ್ನ 1.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಸಹೋದರ-ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 23.5.2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕಂದನಕೋವಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ ಮೊ : 81479 73446


**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 12.000, ಊಟ, ರೂಂ ಉಚಿತ, ವಯಸ್ಸು 18 ರಿಂದ 30 ವರ್ಷ 12 ಗಂಟೆ ಕೆಲಸ. ಸಂಪರ್ಕಿಸಿ.
9740098047, 9740098064

**WANTED**
We have Opening for Telesales (Telecallers)
Good Communication Skill
Required Salary 6000, 7,000,8,000
Depends on Selection
Contact : Mohammed
Hasabhavi Circle, K.R. Market, DVG.
95350 51589, 78670 75786

**HOUSE FOR RENT ONLY**
# 916, Nijalingappa Badavane, 1st main, 4th Cross, Davangere. near Amrutha Vidyalaya, School Nijalingappa Badavane, DVG.,
82964 69527

**ಮಳಿಗೆ ಬಾಡಿಗೆಗಿದೆ**
ದಾವಣಗೆರೆ ನಗರದ ಕೊಂಡಜ್ಜಿ ರಸ್ತೆ, (ಬೂದಿಹಾಳ್ ರಸ್ತೆ) ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಹಾಗೂ ಮುರುಘರಾಜೇಂದ್ರ ಸ್ಕೂಲ್ ಎದುರು (ಗೋಡೆಗೆ ಅಲ್ಟ್ರಟೆಕ್ ಪೇಂಟ್ ಇರುವ) ಮಳಿಗೆ 9x10 ಅಡಿ ಇರುವ ಮಳಿಗೆ ಬಾಡಿಗೆಗಿದೆ ವಿಚಾರಿಸಿ.
99459 65993, 98441 136352

**ನೇರ ಪರೀಕ್ಷೆಗಳು**
SSLC, PUC, BA, B.Com, NTC, BBA, MBA (ALL) B.Tech, Diploma, ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013


**CHANGE OF NAME**

I, MADHUSUDHAN s/o Anandappa H.V, R/o # 1880/154, Anjaneya Nilaya, Behind TV Station, Chikkamanni layout, Davanagere-577005, Karnataka has changed name from MADHUSUDHAN H.A to MADHUSUDHANA H.A. for all the future purposes.
MADHUSUDHANA H.A

**ರಾಜನಹಳ್ಳಿ ಗ್ರಾಮದ ನೆಸ್ವಿ ಹನುಮಂತಪ್ಪ ನಿಧನ**



ಹರಿಹರ ತಾಲ್ಲೂಕು ರಾಜನಹಳ್ಳಿ ಗ್ರಾಮದ ನಿವಾಸಿ ನೆಸ್ವಿ ಹನುಮಂತಪ್ಪ (65) ಇವರು ದಿನಾಂಕ 22.5.2023ರ ಸೋಮವಾರ ಬೆಳಿಗ್ಗೆ ನಿಧನರಾದರು. ಪತ್ನಿ, ನಾಲ್ವರು ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.5.2023ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು ರಾಜನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಅಪರಿಚಿತ ಮಹಿಳೆಯ ಶವ ಪತ್ತೆ

ದಾವಣಗೆರೆ, ಮೇ 22- ನಗರದ ಎಸ್.ಪಿ.ಎಸ್. ನಗರದ 1ನೇ ಹಂತದಲ್ಲಿರುವ ಖಾಲಿ ಮನೆ ಮುಂಭಾಗದಲ್ಲಿ ಅಪರಿಚಿತ ಮಹಿಳೆ ಶವ ಪತ್ತೆಯಾಗಿದೆ. ಮೃತರು ಸುಮಾರು 60-65 ವರ್ಷ ವಯಸ್ಸಿನವಳು. ಗೋಧಿ ಮೈ ಬಣ್ಣ, ಕೋಲು ಮುಖ, ಸಾಧಾರಣ ಮೈಕಟ್ಟು ಹೊಂದಿರುವ ಈಕೆ, ಹಸಿರು ಜಾಕೀಟು, ತಿಳಿ ನೀಲಿ ಬಣ್ಣದ ಹೂವಿನ ಚಿತ್ರವುಳ್ಳ ಸೀರೆ, ನೀಲಿ ಬಣ್ಣದ ಲಂಗ ಧರಿಸಿದ್ದಾಳೆ. ಬಲಗೈಯಲ್ಲಿ ಹಸಿರು ಬಣ್ಣದ ಗಾಜಿನ ಬಳೆಗಳಿವೆ. ಮೃತ ವ್ಯಕ್ತಿಗೆ ಸಂಬಂಧಿಸಿದವರು ಗಾಂಧಿ ನಗರ ಪೊಲೀಸ್ ಠಾಣೆಗೆ ಸಂಪರ್ಕಿಸಬಹುದು. ವಿವರಕ್ಕೆ ಸಂಪರ್ಕಿಸಬೇಕಾದ ದೂರವಾಣಿ 08192-253400, 08192-259337, 08192-272011 ಮೊ: 9480803247.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




## ಹುಟ್ಟುಹಬ್ಬದ ಶುಭಾಶಯಗಳು

50ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿರುವ

**ಶ್ರೀ ಎಸ್.ಜಿ. ವೇದಮೂರ್ತಿ**

ಅವರಿಗೆ ಶುಭಾಶಯಗಳು.
ಶ್ರೀಯುತರಿಗೆ ದೇವರು ಆಯುರಾರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಸಣ್ಣಗೌಡ್ರ ಶ್ರೀಮತಿ ಗೌರಮ್ಮ ಲೋಕೇಶ್ವರಪ್ಪ, ನಗರಸಭೆ ಮಾಜಿ ಉಪಾಧ್ಯಕ್ಷರು, ದಾವಣಗೆರೆ.
- ಶ್ರೀಮತಿ ರೂಪ, ಶ್ರೀ ಸುರೇಶ್ ಎಸ್. ಮಾಳಗಿ ಮತ್ತು ಮಕ್ಕಳು, ರಾಣೇಬೆನ್ನೂರು
- ಶ್ರೀಮತಿ ಕವಿತ, ಶ್ರೀ ಎಸ್.ಜಿ. ಹನುಮಂತಪ್ಪ ಮತ್ತು ಮಕ್ಕಳು, ಶಾಮನೂರು
- ಶ್ರೀಮತಿ ಕೀರ್ತನ, ಶ್ರೀ ವಿನಯ್ ಪಾಟೀಲ್ ಮತ್ತು ಮಕ್ಕಳು, ಬ್ಯಾಡಗಿ
- ಶ್ರೀಮತಿ ಸುನೀತ, ಶ್ರೀ ಅವಿನಾಶ್ ಬ್ಯಾಲಹಾಳ್ ಮತ್ತು ಮಕ್ಕಳು, ಧಾರವಾಡ
- ಶ್ರೀಮತಿ ಕವಿತ, ಶ್ರೀ ಜಿ.ಟಿ. ನಾಗರಾಜ್ ಮತ್ತು ಮಕ್ಕಳು, ಕತ್ತಲಗೆರೆ
- ಶ್ರೀಮತಿ ಚೇತನ, ಶ್ರೀ ಸುನೀಲ್ ಎಸ್. ಜಾಜೂರ್ ಮತ್ತು ಮಕ್ಕಳು, ದಾವಣಗೆರೆ.
- ಶ್ರೀಮತಿ ಆಶಾ, ಶ್ರೀ ಜಿ.ಎಲ್. ಮಂಜುನಾಥ್, ಶಾಮನೂರು
- ಸಣ್ಣಗೌಡ್ರ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.



## ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು




51ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ

**ಶ್ರೀಮತಿ ಸಿದ್ದಮ್ಮ ಮತ್ತು ಶ್ರೀ ನಿಟುವಳ್ಳಿ ಭೀಮಪ್ಪ**

(ಪ್ರಗತಿ ಪರ ರೈತರು ಮತ್ತು ತಾಲ್ಲೂಕು ಮಟ್ಟದ ಕೃಷಿ ಪ್ರಶಸ್ತಿ ಪುರಸ್ಕೃತರು)

ಇವರಿಗೆ ಹಾರ್ದಿಕ ಶುಭಾಶಯಗಳು.



ಶುಭ ಕೋರುವವರು :

**ಗಿರಿಯಳ್ಳರ ಮಹೇಶ್ವರಪ್ಪ ಅಭಿಮಾನಿ ಬಳಗ**

**ಜೆ.ಹೆಚ್. ಪಟೇಲ್ ಬಡಾವಣೆ, ಶಿವ-ಪಾರ್ವತಿ ಬಡಾವಣೆ, ಶಾಮನೂರು ಹಾಗೂ ಹೊಸಕುಂದುವಾಡ**

---

50 Happy Birthday



## ಈ ಸುದಿನ ಸಹೋದರನ ಜನ್ಮದಿನ - ಶುಭಾಶಯ

ನಮ್ಮ ಅಕ್ಕರೆಯ ಸಹೋದರ

**ಶಾಮನೂರು ಎಸ್.ಜಿ. ವೇದಮೂರ್ತಿ**

ಅವರು 50ನೇ ಹುಟ್ಟುಹಬ್ಬವನ್ನು ಅದ್ದೂರಿಯಿಂದ ಆಚರಿಸಿಕೊಳ್ಳುತ್ತಿದ್ದು, ಅವರಿಗೆ ಹಾರ್ದಿಕ ಶುಭಾಶಯಗಳು. ಸುಖಮಯ ಜೀವನ ಸಹೋದರನದಾಗಲಿ...

HAPPY BIRTHDAY Brother





ಶ್ರೀಮತಿ ಗಿರಿಜಮ್ಮ, ದಿ. ಬಿ.ಕೆ. ಹನುಮಂತಪ್ಪ,
ಕು. ಅನುಷ ಬಿ. ಹೆಚ್.
ಶ್ರೀಮತಿ ಅರ್ಪಿತ ಬಿ.ಹೆಚ್.
ಮತ್ತು ಲೋಹಿತ್ ಕುಮಾರ್ ಸಿ.ಪಿ.



ಶ್ರೀಮತಿ ಶೀಲಾ ಎಸ್.ಜಿ. ಮತ್ತು
ಶ್ರೀ ಡಾ. ಗಿರೀಶ್ ಆರ್.ಎಂ.
ಕು. ನೇಹ ಆರ್.ಜಿ.
ಕು. ನಿಶಾ ಆರ್.ಜಿ.

# ಮುಖ್ಯಮಂತ್ರಿಯವರ ಸಚಿವಾಲಯಕ್ಕೆ ಅಧಿಕಾರಿಗಳ ನೇಮಕ

ಬೆಂಗಳೂರು, ಮೇ 22- ಮುಖ್ಯಮಂತ್ರಿಯವರ ಸಚಿವಾಲಯಕ್ಕೆ ಅಧಿಕಾರಿಗಳನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಪ್ರತ್ಯೇಕ ಆದೇಶಗಳನ್ನು ಹೊರಡಿಸಿದೆ.

ಸಿದ್ದರಾಮಯ್ಯ ಅವರು ತಮ್ಮ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಯವರ ಮಾಧ್ಯಮ ಸಮನ್ವಯಕರಾಗಿದ್ದ ಹಿರಿಯ ಪತ್ರ ಕರ್ತ ಕೆ.ವಿ. ಪ್ರಭಾಕರ್ ಅವರನ್ನು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ.

ಅಲ್ಲದೆ, ಪ್ರಭಾಕರ್ ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನೂ ಕೂಡಾ ನೀಡಲಾಗಿದೆ.

ಅಂತೆಯೇ ರಾಜ್ಯ ಸರ್ಕಾರದ ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್ ಅವರನ್ನು ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸಮವರ್ತಿ ಪ್ರಭಾರದಲ್ಲಿರಿಸಿ ನೇಮಕ ಮಾಡಲಾಗಿದೆ.


ಪೌರಾಡಳಿತ ಇಲಾಖೆಯ ಜಂಟಿ ನಿರ್ದೇಶಕ ಬಿ. ಶಿವಸ್ವಾಮಿ ಅವರನ್ನು ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಸಿದ್ದರಾಮಯ್ಯ ಅವರು ಪ್ರತಿಪಕ್ಷ ನಾಯಕರಾಗಿದ್ದ ಸಂದರ್ಭದಲ್ಲಿ ಆಪ್ತ ಕಾರ್ಯದರ್ಶಿಯಾಗಿದ್ದ ಕೆಎಎಸ್ ಅಧಿಕಾರಿ ಡಾ.ವೆಂಕಟೇಶಯ್ಯ ಅವರನ್ನು ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯ ಸಂದರ್ಭದಲ್ಲಿ ವಿಶೇಷಾಧಿಕಾರಿಯಾಗಿದ್ದ ಎಂ. ವೆಂಕಟೇಶ್ ಅವರನ್ನು ಮುಖ್ಯಮಂತ್ರಿಯವರ ವಿಶೇಷಾಧಿಕಾರಿಯಾಗಿ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಲಾಗಿದೆ.

## ಹರಿಹರದಲ್ಲಿ ಇಂದು ಜೆಡಿಎಸ್ ಸಭೆ

ಜೆಡಿಎಸ್ ವತಿಯಿಂದ ಆತ್ಮಾವಲೋಕನ ಹಾಗೂ ಆತ್ಮಶೋಧನಾ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಹೆಚ್.ಕೆ.ವೀರಪ್ಪ ಕಲ್ಯಾಣ ಮಂಟಪದಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರ ನೇತೃತ್ವದಲ್ಲಿ ಹಾಗೂ ಜೆಡಿಎಸ್ ಜಿಲ್ಲಾ ಅಧ್ಯಕ್ಷ ಬಿ. ಚಿದಾನಂದಪ್ಪ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಬಾರಿಕೆರ ಕರಿಯಪ್ಪ**

ನಿವೃತ್ತ ಪ್ರಾಂಶುಪಾಲರು

ನೀವು ನಮ್ಮಿಂದ ದೂರವಾಗಿ ಇಂದಿಗೆ 23-05-2023ಕ್ಕೆ 2 ವರ್ಷವಾಯಿತು. ಆದರು ನೀವು ಇಲ್ಲೇ ಎಲ್ಲೋ ಹೋಗಿದ್ದೇರೆಂದು ನಿಮ್ಮ ನಿರೀಕ್ಷೆಯಲ್ಲಿದ್ದೇವೆ, ನಿಮ್ಮ ಪ್ರೀತಿ, ವಾತ್ಯಲ್ಯ, ಅಂತಃಕರಣ, ಮುಗ್ದನಗು, ನಮ್ಮೆಲ್ಲರ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

**ಇಂತಿ ದುಃಖ ತಪ್ತರು**

ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ದಿ. ಶ್ರೀಮತಿ ನಾಗಮ್ಮನವರು ಶಾಮನೂರು**

ನಿಧನ : 22.05.2021

ನೀವು ನಮ್ಮನ್ನಗಲಿ ಎರಡು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿರುವ,

**ಬಸವರಾಜಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಶಾಮನೂರು.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 21-05-2023ರ ಭಾನುವಾರ ನಿಧನರಾದ ಕರ್ನಾಟಕ ರಾಜ್ಯ ಬೀಜ ನಿಗಮದ ಮಾಜಿ ಅಧ್ಯಕ್ಷರಾದ

**ಶ್ರೀ ರಾಂಪುರದ ಆರ್.ಜಿ. ಮಹೇಶ್ವರಪ್ಪ** M.Sc. Agri

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ, ಮೃತರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಶ್ರೀಮತಿ ಸಾವಿತ್ರ ಮತ್ತು ಶ್ರೀ ಡಾ|| ಕೆ.ಸಿ. ನಟರಾಜ ಮತ್ತು ಮಕ್ಕಳು**
**ಕೆ.ಸಿ. ಮೆಮೋರಿಯಲ್ ಆಸ್ಪತ್ರೆ, ದಾವಣಗೆರೆ.**

|| ಶ್ರೀ ಬೀರಲಿಂಗೇಶ್ವರ ಪ್ರಸನ್ನ || || ಶ್ರೀ ಹೊನ್ನಮ್ಮದೇವಿ ಕೃಪ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ವಿನೋಬನಗರ ವಾಸಿ
**ಜೋಗಪ್ಪನವರ ಶ್ರೀಮತಿ ಲಕ್ಷ್ಮಿದೇವಮ್ಮ ದಿ. ಜೆ. ಸಿದ್ದಪ್ಪ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ 12.5.2023ನೇ ಶುಕ್ರವಾರ ಬೆಳಿಗ್ಗೆ 5.00ಕ್ಕೆ ನನ್ನ ಮಗನಾದ

**ಶ್ರೀ ಜೆ.ಎಸ್. ಹೊನ್ನಪ್ಪ**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ 24.5.2023ನೇ ಬುಧವಾರ ಬೆಳಿಗ್ಗೆ 11ಕ್ಕೆ ಮೃತರ ಸ್ವಗೃಹ 'ಸಮೃದ್ಧಿ ನಿಲಯ' 4ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ವಿನೋಬ ನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳ ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು :

**ಜೋಗಪ್ಪನವರ ಶ್ರೀಮತಿ ಲಕ್ಷ್ಮಿದೇವಮ್ಮ ದಿ. ಶ್ರೀ ಜೆ. ಸಿದ್ದಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು,**
ಮೃತರ ಧರ್ಮಪತ್ನಿ : **ಶ್ರೀಮತಿ ಇಂದ್ರಮ್ಮ ಮತ್ತು ಮಕ್ಕಳು, ಅಳಿಯಂದಿರು,**
**ಜೋಗಪ್ಪನವರ ವಂಶಸ್ಥರು ಮತ್ತು ಅಡಾಣಿ ವಂಶಸ್ಥರು ಹಾಗೂ ಬಂಧು-ಮಿತ್ರರು,**
**ದಾವಣಗೆರೆ. ಮೊ : 90604 96253, 78925 20225**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಶ್ರೀಮತಿ ಎಸ್. ಗಂಗಮ್ಮ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ವಾಸಿ ಮಲ್ಲಾರಪ್ಪರ

**ಶ್ರೀ ಎಸ್. ಸಿದ್ದಪ್ಪನವರ**

ಧರ್ಮಪತ್ನಿ

**ಶ್ರೀಮತಿ ಎಸ್. ಗಂಗಮ್ಮ**

ಇವರು, ದಿನಾಂಕ : 22.05.2023ನೇ ಸೋಮವಾರ ಬೆಳಿಗ್ಗೆ 10.25ಕ್ಕೆ ನಿಧನರಾಗಿರುತ್ತಾರೆ.

ಪತಿ, ಐದು ಜನ ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು, ಮೊಮ್ಮಮ್ಮಕ್ಕಳು, ಮರಿಮೊಮ್ಮಕ್ಕಳು, ಸೊಸೆಯಂದಿರು ಮತ್ತು ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು

ದಿನಾಂಕ : 23.05.2023ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ದೊಡ್ಡಬಾತಿಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.

ಫೋನ್ : 98809 97727, 97317 22999

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಮಂಗಳವಾರ, ಮೇ 23, 2023 | ಮಧ್ಯ ಕರ್ನಾಟಕದ ಆಪ್ತ ಒಡನಾಡಿ | ☎ 08192 254736 | 91642 99999

# ಪ್ರಮಾಣ ವಚನದ ವೇಳೆ ವ್ಯಕ್ತಿ, ದೈವ ನಿಷ್ಠೆ ಪ್ರದರ್ಶನ

## ಕಲ್ಲೇಶ್ವರ ದೇವರ ಹೆಸರಿನಲ್ಲಿ ಎಸ್ಸೆಸ್, 'ಆರಾಧ್ಯ ದೈವ ಡಿ.ಕೆ.ಶಿವಕುಮಾರ್' ಹೆಸರಿನಲ್ಲಿ ಶಿವಗಂಗಾ ಪ್ರಮಾಣ ವಚನ



ದಾವಣಗೆರೆ ಜಿಲ್ಲೆಯ ನೂತನ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್, ಕೆ.ಎಸ್. ಬಸವಂತಪ್ಪ, ದೇವೇಂದ್ರಪ್ಪ, ಶಿವಗಂಗಾ ಬಸವರಾಜ್, ಬಿ.ಪಿ. ಹರೀಶ್ ಪ್ರಮಾಣ ವಚನ ಸ್ವೀಕರಿಸಿದರು.

ಬೆಂಗಳೂರು, ಮೇ 22- ವಿಧಾನಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸುವಾಗ ನೂತನ ಶಾಸಕರು ವ್ಯಕ್ತಿ ಹಾಗೂ ಕುಲದೇವರಿಂದ ಹಿಡಿದು ಗೋಮಾತೆಯವರೆಗೆ ತಮ್ಮ ನಿಷ್ಠೆ ಪ್ರದರ್ಶಿಸಿದ್ದಾರೆ.

ಪ್ರಮಾಣ ವಚನದ ವೇಳೆ ದೇವರು, ಇಲ್ಲವೇ ಸಂವಿಧಾನದ ಹೆಸರಿನಲ್ಲಿ ಮಾತ್ರ ಪ್ರಮಾಣ ವಚನ ಸ್ವೀಕರಿಸುವಂತೆ ಹಂಗಾಮಿ ವಿಧಾನಸಭಾಧ್ಯಕ್ಷ ಆರ್.ವಿ. ದೇಶಪಾಂಡೆ ತಿಳಿಸಿದ್ದರು.

ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಂತರ ಪ್ರಮಾಣ ವಚನ ಸ್ವೀಕರಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗಂಗಾಧರ ಅಜ್ಜಯ್ಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ನಂತರ ಶಾಸಕರು ತಮಗೆ ಇಷ್ಟವಾದ ದೇವರು ಹಾಗೂ ನಾಯಕರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಗಮನ ಸೆಳೆದರು.

ಹಸಿರು ಶಾಲು ಧರಿಸಿದ್ದ ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ ಅವರು, ಭಗವಂತ ಹಾಗೂ ನನ್ನ ಆರಾಧ್ಯ ದೈವ ಡಿ.ಕೆ. ಶಿವಕುಮಾರ್ ಸಾಹೇಬರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವುದಾಗಿ ಹೇಳುವ ಮೂಲಕ ಸದನದ ಹುಬ್ಬೇರುವಂತೆ ಮಾಡಿದ್ದರು.

ಸದನದ ಅತ್ಯಂತ ಹಿರಿಯ ಶಾಸಕರಾಗಿರುವ ಶಾಮನೂರು ಶಿವಶಂಕರಪ್ಪ ಅವರು ಕಲ್ಲೇಶ್ವರ ಸ್ವಾಮಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಶಾಸಕ ಹೆಚ್.ಡಿ. ರಂಗನಾಥ್ ಅವರೂ ಸಹ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವುದಾಗಿ ಹೇಳಿದರು. ಆಗ ಮಧ್ಯ ಪ್ರವೇಶಿಸಿದ ಸದನದ ಕಾರ್ಯದರ್ಶಿ, ಭಗವಂತ ಇಲ್ಲವೇ ಸಂವಿಧಾನದ ಹೆಸರಿನಲ್ಲಿ ಪ್ರಮಾಣ (7ನೇ ಪುಟಕ್ಕೆ)

## ಶನಿವಾರ ಸಚಿವ ಸಂಪುಟ ವಿಸ್ತರಣೆ ಸಾಧ್ಯತೆ

ಬೆಂಗಳೂರು, ಮೇ 22 - ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮಂತ್ರಿಮಂಡಲವನ್ನು ಬರುವ ಶನಿವಾರ ವಿಸ್ತರಿಸಿ 20 ಮಂದಿಯನ್ನು ಹೊಸದಾಗಿ ಸೇರ್ಪಡೆ ಮಾಡಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಂಪುಟಕ್ಕೆ ಯಾರನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಯಾರಿಗೆ ಯಾವ ಖಾತೆ ನೀಡಬೇಕು ಎಂಬ ಬಗ್ಗೆ ಸಮಾಲೋಚನೆ ನಡೆಸಿ ವರಿಷ್ಠರ ಅನುಮತಿ ಪಡೆಯಲು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜತೆಗೂಡಿ ಬುಧವಾರ ಸಂಜೆ ಮುಖ್ಯಮಂತ್ರಿ ದೆಹಲಿಗೆ ತೆರಳಲಿದ್ದಾರೆ. ಗುರುವಾರದಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ಸುರ್ಜೇವಾಲಾ ಅವರ ಜೊತೆ ಚರ್ಚೆ ನಡೆಸಿ ಪಟ್ಟಿ ಅಂತಿಮಗೊಳಿಸಲಿದ್ದಾರೆ.

ಶುಕ್ರವಾರವೇ ಸಂಪುಟ ವಿಸ್ತರಣೆ ಮಾಡಲು ರಾಜಭವನದ ಸಮಯ ಕೋರಿದ್ದರು. ಆದರೆ, ರಾಜ್ಯಪಾಲರು ಪ್ರವಾಸದಲ್ಲಿರುವ ಕಾರಣ ಶನಿವಾರಕ್ಕೆ ಸಮಯ ನಿಗದಿ (7ನೇ ಪುಟಕ್ಕೆ)

## ಮುರುಘಾ ಮಠ ಆಡಳಿತಾಧಿಕಾರಿ ನೇಮಕ ಆದೇಶ ರದ್ದು

ಬೆಂಗಳೂರು, ಮೇ 22- ಚಿತ್ರದುರ್ಗ ಮುರುಘಾ ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ತೀರ್ಪು ಪ್ರಕಟಿಸಿತು.

ಸರ್ಕಾರ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಆಡಳಿತಾಧಿಕಾರಿ ಯಾಗಿ ನೇಮಕ ಮಾಡಿದ್ದನ್ನು ಪ್ರಶ್ನಿಸಿ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಹೈಕೋರ್ಟ್ ನಲ್ಲಿ ರಿಟ್ ಅರ್ಜಿ (7ನೇ ಪುಟಕ್ಕೆ)

## ಸಿದ್ದರಾಮಯ್ಯ ಅವರನ್ನು ಟೀಕಿಸಿದ ಶಿಕ್ಷಕ ಅಮಾನತ್ತು

ಹೊಸದುರ್ಗ, ಮೇ 21- ಫೇಸ್‌ಬುಕ್ ಖಾತೆಯಲ್ಲಿ ಸರ್ಕಾರವನ್ನು ಟೀಕಿಸುವ ಬರಹ ಪೋಸ್ಟ್ ಮಾಡಿದ ಆರೋಪದ ಮೇಲೆ ಶಿಕ್ಷಕರೊಬ್ಬರನ್ನು ಅಮಾನತ್ತು ಮಾಡಲಾಗಿದೆ. ತಾಲ್ಲೂಕಿನ ಕಾನುಬೇನಹಳ್ಳಿ ಶಿಕ್ಷಕ ಶಾಂತಮೂರ್ತಿ ಎಂ.ಜಿ. ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಲ್. ಜಯಪ್ಪ ಅಮಾನತ್ತು ಮಾಡಿದ್ದಾರೆ. ಸಿದ್ದರಾಮಯ್ಯ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಶಾಂತಮೂರ್ತಿ ಅವರು, 'ಎಸ್.ಎಂ. ಕೃಷ್ಣ ಅವಧಿಯಲ್ಲಿ 3,590 ಕೋಟಿ, (7ನೇ ಪುಟಕ್ಕೆ)

## ಜನನ-ಮರಣ ಮಾಹಿತಿ ಮತದಾರರ ಪಟ್ಟಿಗೆ ಜೋಡಿಸಲು ಪರಿಶೀಲನೆ

ನವದೆಹಲಿ, ಮೇ 22 – ಜನನ ಹಾಗೂ ಮರಣಗಳ ವಿವರಗಳನ್ನು ಮತದಾರರ ಪಟ್ಟಿ ಜೊತೆ ಜೋಡಿಸುವ ಕುರಿತು ಮಸೂದೆಯೊಂದನ್ನು ರೂಪಿಸಲು ಸರ್ಕಾರ ಯೋಜಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ. ಜನನ ಹಾಗೂ ಮರಣ ಪ್ರಮಾಣ ಪತ್ರಗಳ ಮಾಹಿತಿಯನ್ನು ಸರಿಯಾಗಿ ಸಂರಕ್ಷಿಸಬೇಕಿದೆ. ಈ ಮಾಹಿತಿಯನ್ನು ಮತದಾರರ ಪಟ್ಟಿಗೆ ಜೋಡಿಸಲು ಮಸೂದೆಯೊಂದನ್ನು ರೂಪಿಸುವ ಬಗ್ಗೆ ಪರಿಗಣಿಸಲಾಗುತ್ತಿದೆ ಎಂದವರು ಹೇಳಿದ್ದಾರೆ. ಈ ಮಸೂದೆ ರೂಪುಗೊಂಡ ನಂತರ ವ್ಯಕ್ತಿಯೊಬ್ಬರಿಗೆ 18 ವರ್ಷ ತುಂಬಿದಾಗ ಅವರ ಹೆಸರು ಸ್ವಯಂ ಚಾಲಿತವಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಲಿದೆ. ಸಾವನ್ನಪ್ಪಿದಾಗ ಸ್ವಯಂ ಚಾಲಿತವಾಗಿ ಮತಪಟ್ಟಿಯಿಂದ ಹೆಸರು ಹೊರ ಹೋಗಲಿದೆ ಎಂದು ಅಮಿತ್ ಷಾ ವಿವರಿಸಿದ್ದಾರೆ.

## ಶೇ.55 ಮಾನಸಿಕ ವಿಕಲಚೇತನಗೆ ಎಂ.ಬಿ.ಬಿ.ಎಸ್. ಮೀಸಲಾತಿ

**ಪರಿಣಿತರ ಸಮಿತಿ ರಚಿಸಲು ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಮೇ 22 – ಶೇ.55ರಷ್ಟು ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಯೋರ್ವ ಎಂ.ಬಿ.ಬಿ. ಎಸ್.ನಲ್ಲಿ ಮೀಸಲಾತಿ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ಈ ಬಗ್ಗೆ ಪರಿಶೀಲಿಸಲು ಪರಿಣಿತರ ಸಮಿತಿ ರಚಿಸುವಂತೆ ನ್ಯಾಯಾಲಯ ಆದೇಶಿಸಿದೆ. ಮಾನಸಿಕ ಅಸ್ವಸ್ಥತೆ, ವಿಶೇಷ ಕಲಿಕೆಯ ಸಮಸ್ಯೆ ಹಾಗೂ ಆಟಿಸಂ ಸಮಸ್ಯೆ ಎದುರಿಸುತ್ತಿರುವ ವಿಕಲಚೇತನರ ಪರಿಶೀಲನೆಗೆ ಮಾರ್ಗಗಳನ್ನು ರೂಪಿಸುವ ಬಗ್ಗೆ ಸಮಿತಿ (7ನೇ ಪುಟಕ್ಕೆ)









ನೋಟುಗಳ ವಾಪಸಾತಿ

# ಆರ್ಥಿಕತೆ ಮೇಲೆ ಪರಿಣಾಮ ಕಡಿಮೆ


ನವದೆಹಲಿ, ಮೇ 22 – ಒಟ್ಟು ಚಲಾವಣೆಯಲ್ಲಿರುವ ನೋಟುಗಳ ಪೈಕಿ 2,000 ರೂ. ನೋಟುಗಳ ಪ್ರಮಾಣ ಶೇ.10.8ರಷ್ಟು ಮಾತ್ರವಾಗಿದೆ. ಹೀಗಾಗಿ ಅವುಗಳನ್ನು ವಾಪಸ್ ಪಡೆಯುವುದರಿಂದ ಆರ್ಥಿಕತೆಯ ಮೇಲೆ ಆಗುವ ಪರಿಣಾಮ ತೀರಾ ಕಡಿಮೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದರು.

ರಿಸರ್ವ್ ಬ್ಯಾಂಕ್‌ನ ನೋಟುಗಳ ನಿರ್ವಹಣೆ ಕಾರ್ಯಚರಣೆ ಅಂಗವಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸೆಪ್ಟೆಂಬರ್ 30ರವರೆಗೆ 2,000 ರೂ.ಗಳ ನೋಟುಗಳನ್ನು ವಾಪಸ್ ನೀಡಲು ಗಡುವು ನೀಡಲಾಗಿದೆ. ಅಷ್ಟರಲ್ಲಿ ಎಲ್ಲಾ ನೋಟುಗಳು ವಾಪಸ್ ಬರುವ ನಿರೀಕ್ಷೆ ಇದೆ ಎಂದವರು ತಿಳಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಲಾವಣೆಯಲ್ಲಿರುವ ನೋಟುಗಳಲ್ಲಿ 2,000 ರೂ.ಗಳ ನೋಟುಗಳ ಪ್ರಮಾಣ ಶೇ.10.8 ಮಾತ್ರ. ಹೀಗಾಗಿ ಆರ್ಥಿಕತೆಯ ಮೇಲೆ ಆಗುವ ಪರಿಣಾಮ ತೀರಾ ಕಡಿಮೆ ಎಂದು ಹೇಳಿದರು.

2,000 ರೂ.ಗಳ ನೋಟುಗಳನ್ನು ಚಲಾವಣೆಗೆ ಸಾಮಾನ್ಯವಾಗಿ ಬಳಸುವುದಿಲ್ಲ. ಇವುಗಳ ಚಲಾವಣೆಯೇ ಕಡಿಮೆ ಇದೆ. ಹೀಗಾಗಿ ಆರ್ಥಿಕ ಚಟುವಟಿಕೆಗಳ ಮೇಲೆ ಪರಿಣಾಮವಾಗುವುದಿಲ್ಲ ಎಂದು ದಾಸ್ ತಿಳಿಸಿದರು.





ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅಭಿಮತ

ಶುದ್ಧ ನೋಟು ನೀತಿಯ ಅಂಗವಾಗಿ ರಿಸರ್ವ್ ಬ್ಯಾಂಕ್ ಕಾಲಾನುಕಾಲಕ್ಕೆ ಹಳೆಯ ನೋಟುಗಳನ್ನು ವಾಪಸ್ ಪಡೆಯುತ್ತದೆ. 2013-14ರಲ್ಲೂ ಸಹ ರಿಸರ್ವ್ ಬ್ಯಾಂಕ್ 2005ಕ್ಕೂ ಮುಂಚಿನ ನೋಟುಗಳನ್ನು ವಾಪಸ್ ಪಡೆದಿತ್ತು ಎಂದವರು ಹೇಳಿದರು. 2,000 ರೂ.ಗಳ ನೋಟುಗಳನ್ನು ಶುದ್ಧ ನೋಟು ನೀತಿಯ ಅನ್ವಯ ವಾಪಸ್ ಪಡೆಯಲಾಗುತ್ತಿದೆ. ಆದರೂ, ಅವುಗಳು ಕಾನೂನು ಮಾನ್ಯತೆ ಹೊಂದಿರುತ್ತವೆ. ಸೆಪ್ಟೆಂಬರ್ 30ರ ವೇಳೆಗೆ ಎಲ್ಲಾ ನೋಟುಗಳನ್ನು ಬ್ಯಾಂಕುಗಳಿಗೆ ಜಮಾ ಮಾಡುವ ನಿರೀಕ್ಷೆ ಇದೆ. ಆನಂತರವೇ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು ಎಂದು ದಾಸ್ ತಿಳಿಸಿದರು.

ನೋಟುಗಳ ವಿನಿಮಯಕ್ಕೆ ಸಾಕಷ್ಟು ಸಮಯ ಇದೆ. ನೋಟುಗಳನ್ನು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುವುದಕ್ಕೆ ಸಂಬಂಧಿಸಿದಂತೆ ಜನರು ಆತಂಕ ಪಡಬಾರದು ಎಂದವರು ತಿಳಿಸಿದರು. ಬ್ಯಾಂಕುಗಳ ಬಳಿ ಸಾಕಷ್ಟು ಪ್ರಮಾಣದ ಮುದ್ರಿತ ನೋಟುಗಳಿವೆ. ಹೀಗಾಗಿ ನಗದು ಹರಿವಿನ ಮೇಲೆ ಪರಿಣಾಮವಾಗುವುದಿಲ್ಲ. ಈ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎಂದು ದಾಸ್ ಹೇಳಿದರು.

ವಿದೇಶಗಳಲ್ಲಿರುವವರು ಹಾಗೂ ದೀರ್ಘಾವಧಿ ವಿದೇಶಿ ಭೇಟಿಯಲ್ಲಿರುವವರು ಮತ್ತು ವಿದೇಶದಲ್ಲಿ ಕೆಲಸ ಮಾಡುತ್ತಿರುವವರು ನೋಟುಗಳನ್ನು ಬದಲಿಸಿಕೊಳ್ಳಲು ಸಮಸ್ಯೆ ಎದುರಿಸುವ ಬಗ್ಗೆ ನಮಗೆ ಸಂವೇದನೆ ಇದೆ. ಈ ವಿಷಯವನ್ನು ಸುಸೂತ್ರವಾಗಿ ಬಗೆಹರಿಸಲಾಗುವುದು ಎಂದು ಆರ್.ಬಿ.ಐ. ಗವರ್ನರ್ ಹೇಳಿದರು.

1,000 ರೂ. ನೋಟುಗಳನ್ನು ಮತ್ತೆ ಚಲಾವಣೆಗೆ ತರುವ ಸಾಧ್ಯತೆಯ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಊಹಾತ್ಮಕ ಪ್ರಶ್ನೆಯಾಗಿದೆ. ಸದ್ಯಕ್ಕೆ ಇಂತಹ ಪ್ರಸ್ತಾಪವಿಲ್ಲ ಎಂದರು.

## ನಿಗಮ, ಮಂಡಳಿಗಳ ನಾಮ ನಿರ್ದೇಶನ ರದ್ದು

ಬೆಂಗಳೂರು, ಮೇ 22 - ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ರಾಜ್ಯದ ಎಲ್ಲ ನಿಗಮ, ಮಂಡಳಿಗಳಿಗೆ ನೇಮಕ ಮಾಡಲಾಗಿದ್ದ ಅಧ್ಯಕ್ಷರು, ನಿರ್ದೇಶಕರು ಹಾಗೂ ಪದಾಧಿಕಾರಿಗಳ ನೇಮಕಾತಿಗಳನ್ನು ರದ್ದುಗೊಳಿಸಲಾಗಿದೆ. ಜೊತೆಗೆ ನಿಗಮ, ಮಂಡಳಿಗಳಿಗೆ ನೀಡಲಾದ ಅನುದಾನ ಹಾಗೂ ಹಣ ಹಂಚಿಕೆಯನ್ನು ತಕ್ಷಣದಿಂದಲೇ ತಡೆ ಹಿಡಿಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ಹೊರಡಿಸಿದ್ದಾರೆ.

ನೂತನ ವಿಧಾನಸಭೆಯ ಅಧಿವೇಶನ ಆರಂಭವಾದ ಮೊದಲ ದಿನವೇ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಅಕಾಡೆಮಿಗಳು, ನಿಗಮ-ಮಂಡಳಿಗಳಿಗೆ ಮಾಡಲಾದ ನೇಮಕಾತಿಗಳನ್ನು ರದ್ದುಗೊಳಿಸಲಾಗಿದೆ. ಈ ನಿಗಮ, ಮಂಡಳಿಗಳ ಪದಾಧಿಕಾರಿಗಳು ಉಪಯೋಗಿಸುತ್ತಿದ್ದ ಸರ್ಕಾರಿ ಸೌಲಭ್ಯಗಳನ್ನೂ ವಾಪಸ್ ಪಡೆಯಲಾಗಿದೆ. ಇದರಿಂದಾಗಿ ಈ ಹಿಂದೆ ನಿಗಮ, ಮಂಡಳಿಗಳಿಗೆ ನೇಮಕಗೊಂಡವರ ಅಧಿಕಾರ ಹತ್ತು ತಿಂಗಳಿಗೆ ಮೊಟಕಾದಂತಾಗಿದೆ.

## ಮೆಟಾಗೆ ಯುರೋಪ್ ಒಕ್ಕೂಟದಿಂದ 1.3 ಶತಕೋಟಿ ಡಾಲರ್ ದಂಡ

ಲಂಡನ್, ಮೇ 22 – ಸಾಮಾಜಿಕ ಜಾಲತಾಣ ದೈತ್ಯ ಕಂಪನಿಯಾದ ಮೆಟಾಗೆ ಯುರೋಪ್ ಒಕ್ಕೂಟ ದಾಖಲೆಯ 1.3 ಶತಕೋಟಿ ಡಾಲರ್ ದಂಡ ವಿಧಿಸಿದೆ. ಯುರೋಪ್‌ನಲ್ಲಿ ಪಡೆಯಲಾದ ಮಾಹಿತಿಯನ್ನು ಬೇರೆಡೆಗೆ ರವಾನಿಸದಂತೆ ನಿರ್ಬಂಧ ಹೇರಲಾಗಿದೆ.


ಯುರೋಪ್ ಒಕ್ಕೂಟ ಐದು ವರ್ಷಗಳ ಹಿಂದೆ ಅತ್ಯಂತ ಕಠಿಣವಾದ ಖಾಸಗಿತನ ನೀತಿಯನ್ನು ಜಾರಿಗೆ ತಂದಿದೆ. ನಂತರ ಹೇರಲಾದ ಅತಿ ದೊಡ್ಡ ದಂಡ ಇದಾಗಿದೆ. ಈ ಹಿಂದೆ ಅಮೆಜಾನ್ ಸಂಸ್ಥೆಗೆ 746 ದಶಲಕ್ಷ ಯೂರೋಗಳ ದಂಡ ವಿಧಿಸಲಾಗಿತ್ತು.

ಯುರೋಪ್ ಒಕ್ಕೂಟದ ಈ ಕ್ರಮದಿಂದ ಈ ವಲಯದ ಬಳಕೆದಾರರಿಗೆ ಸೇವೆ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ಮೆಟಾ ಈ ಹಿಂದೆ ಎಚ್ಚರಿಸಿತ್ತು. ಈಗ ಯುರೋಪ್ ಒಕ್ಕೂಟದ ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ಹೇಳಿದೆ.

ಸದ್ಯಕ್ಕೆ ಮೆಟಾ ಸಂಸ್ಥೆಯಡಿ ಕಾರ್ಯನಿರ್ವಹಿಸುವ ಫೇಸ್‌ಬುಕ್ ಬಳಕೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಆದರೆ, ಯುರೋಪಿನ ಮಾಹಿತಿಯನ್ನು ಅಮೆರಿಕಗೆ ರವಾನಿಸಬಾರದು ಎಂಬ ನಿರ್ಬಂಧ ದೋಷಪೂರಿತವಾಗಿದೆ.

ಇತರೆ ದೇಶಗಳೂ ಸಹ ಇದೇ ರೀತಿಯ ಕ್ರಮ ತೆಗೆದುಕೊಳ್ಳಬಹುದು ಎಂದು ಮೆಟಾದ ಜಾಗತಿಕ ಅಧ್ಯಕ್ಷ ನಿಕ್ ಕ್ಲೆಗ್ ಹೇಳಿದ್ದಾರೆ.






# ಶನಿವಾರ ಸಚಿವ ಸಂಪುಟ ವಿಸ್ತರಣೆ ಸಾಧ್ಯತೆ

(5ನೇ ಪುಟದಿಂದ) ಮಾಡಿಕೊಂಡಿದ್ದಾರೆ.

ಈಗಾಗಲೇ ಉಪ ಮುಖ್ಯಮಂತ್ರಿ ಸೇರಿದಂತೆ 9 ಮಂದಿಯನ್ನು ಸೇರ್ಪಡೆ ಮಾಡಿಕೊಂಡಿದ್ದು ಸದ್ಯಕ್ಕೆ ಮಂತ್ರಿ ಮಂಡಲದ ಗಾತ್ರ 10ರಷ್ಟಿದೆ. ಸಂಪುಟಕ್ಕೆ 34 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲು ಅವಕಾಶವಿದ್ದು, 3-4 ಸಚಿವ ಸ್ಥಾನವನ್ನು ಉಳಿಸಿಕೊಂಡು ಉಳಿದವು ಗಳನ್ನು ಭರ್ತಿ ಮಾಡಲು ತೀರ್ಮಾನಿಸಿದ್ದಾರೆ. ಬರುವ ಭಾನುವಾರದ ವೇಳೆಗೆ ಪೂರ್ಣ ಪ್ರಮಾಣದ ಮಂತ್ರಿಮಂಡಲ ರಚನೆಯಾಗಿ ಸೋಮವಾರದಿಂದಲೇ ಸಂಪುಟದ ಎಲ್ಲಾ ಸದಸ್ಯರು ಯುದ್ಧೋಪಾದಿಯಲ್ಲಿ ಕೆಲಸ ಮಾಡಲು ಖಾತೆ ಹಂಚಿಕೊಡಲಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಿ ಹೆಚ್ಚು ಸ್ಥಾನ ಗಳಿಸುವ ಲೆಕ್ಕಾಚಾರವನ್ನು ಗಮನದಲ್ಲಿಟ್ಟುಕೊಂಡೇ ತಮ್ಮ ಮಂತ್ರಿ ಮಂಡಲ ವಿಸ್ತರಣೆ ಮಾಡುತ್ತಿರುವ ಮುಖ್ಯಮಂತ್ರಿ ಅವರು, ಲೋಕಸಭಾ ಚುನಾವಣೆಗೂ ಮುನ್ನ ಜನತೆ ತಮಗೆ ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸಲು ಕೆಲವು ಕಾರ್ಯಕ್ರಮಗಳನ್ನು ಅಳವಡಿಸುತ್ತಿದ್ದಾರೆ.

ವಿಧಾನಸಭಾ ಚುನಾವಣೆಗೂ ಮುನ್ನ ಜನತೆಗೆ ನೀಡಿರುವ 5 ಗ್ಯಾರಂಟಿಗಳನ್ನು ಬರುವ ಜೂನ್‌ನಿಂದ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖಾ ಸಚಿವರು ಕಾರ್ಯೋನ್ಮುಖರಾಗಬೇಕು ಎಂಬುದು ಅವರ ಉದ್ದೇಶವಾಗಿದೆ.

ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ ಅವರು, ಈ ಸರ್ಕಾರ ಕ್ರಿಯಾಶೀಲ ಆಡಳಿತ ನೀಡಲು ಪೂರ್ಣ ಪ್ರಮಾಣದ ಮಂತ್ರಿ ಮಂಡಲ ರಚಿಸಿ, ಜನರ ಕೆಲಸ ಮಾಡಲು ಅವಕಾಶ ಮಾಡಿ ಕೊಡಿ ಎಂದು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದ್ದಾರೆ.

ವರಿಷ್ಠರ ಆದೇಶದಂತೆ ಮಂತ್ರಿ ಮಂಡಲ ವಿಸ್ತರಣೆಗೆ ಮುಂದಾಗಿರುವ ಮುಖ್ಯಮಂತ್ರಿ ಒಂದೇ ಹಂತದಲ್ಲಿ ಖಾತೆ ಹಂಚಿಕೆ ಮಾಡುವ ಉದ್ದೇಶದಿಂದ ಕಳೆದ ಶನಿವಾರ ತಮ್ಮ ಮಂತ್ರಿ ಮಂಡಲ ಸೇರಿರುವ ಯಾವ ಸದಸ್ಯರಿಗೂ ಇನ್ನೂ ಖಾತೆ ನೀಡಿಲ್ಲ.

ಬರುವ ಭಾನುವಾರದವರೆಗೂ ಸಚಿವರು ಖಾತೆ ರಹಿತರಾಗಿಯೇ ಕೆಲಸ ನಿರ್ವಹಿಸಲಿದ್ದಾರೆ. ಸರ್ಕಾರ ರಚನೆ ಸಂದರ್ಭದಲ್ಲೇ 28 ಮಂದಿಯನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲು ಮುಖ್ಯಮಂತ್ರಿ ಅವರು ನಿರ್ಧರಿಸಿದ್ದರು. ಆದರೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರ ನಡುವೆ ಸಚಿವ ಸ್ಥಾನಕ್ಕೆ ಶಾಸಕರ ಪಟ್ಟಿ ಆಯ್ಕೆ ಮಾಡುವಲ್ಲಿ ಮೂಡದ ಒಮ್ಮತದಿಂದ ಅದು ಸಾಧ್ಯವಾಗಿರಲಿಲ್ಲ.

# ವಚನದ ವೇಳೆ ವ್ಯಕ್ತಿ, ದೈವ ನಿಷ್ಠೆ ಪ್ರದರ್ಶನ

(5ನೇ ಪುಟದಿಂದ) ವಚನ ಸ್ವೀಕರಿಸದೇ ಇದ್ದರೆ ಅಸಿಂಧುವಾಗುತ್ತದೆ ಎಂದು ಹೇಳಿದರು. ನಂತರ ರಂಗನಾಥ್ ಅವರು ಭಗವಂತ ಹಾಗೂ ರೈತನ ಹೆಸರಿನಲ್ಲಿ ಪ್ರಮಾಣ ವಚನ ಎಂದು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಕ್ಷೇತ್ರದ ಬಿಜೆಪಿ ಶಾಸಕಿ ಭಾಗೀರಥಿ ಮುರುಳ್ಯ ಅವರು ಮತದಾರರು ಹಾಗೂ ಮನೆ ದೇವರಾದ ಸತ್ಯಸಾರಾಮಣಿ ಮತ್ತು ಸತ್ಯಪದನಾದಿ ಅಮ್ಮ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವುದಾಗಿ ಹೇಳಿದರು. ಇದಕ್ಕೆ ಸದನದಲ್ಲಿ ಕೆಲವರು ಆಕ್ಷೇಪಿಸಿದರು. ಆಗ ಮುರುಳ್ಯ ಬೆಂಬಲಕ್ಕೆ ಬಂದ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಈ ಪದ್ಧತಿ ಮೊದಲು ಆರಂಭಿಸಿದ್ದು ಯಾರು? ಎಂದು ಪರೋಕ್ಷವಾಗಿ ಡಿ.ಕೆ. ಶಿವಕುಮಾರ್ ಅವರು ಗಂಗಾಧರ ಅಜ್ಜಯ್ಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದನ್ನು ಪ್ರಸ್ತಾಪಿಸಿದರು.

ಬಸನಗೌಡ ಪಾಟೀಲ್ ಯತ್ನಾಳ್ ಅವರು ಹಿಂದುತ್ವ ಹಾಗೂ ಗೋಮಾತೆಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದರು.

ಕಾಂಗ್ರೆಸ್‌ನ ಶಿವಾನಂದ ಪಾಟೀಲ ಅಣ್ಣ ಬಸವಣ್ಣ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಜಿ.ಟಿ. ದೇವೇಗೌಡ ಅವರು ಚಾಮುಂಡೇಶ್ವರಿ ದೇವಿಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.


ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರು ಗಂಗಾವತಿ ಜನತೆ ಮತ್ತು ಆಂಜನಾದ್ರಿ ಹನುಮಂತನ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು. ಕಾಂಗ್ರೆಸ್ ಖಲೀಜ್ ಫಾತೀಮಾ ಅಲ್ಲಾಹೆಸರಿನಲ್ಲಿಇಂಗ್ಲಿಷ್‌ನಲ್ಲಿಪ್ರಮಾಣ ಸ್ವೀಕರಿಸಿದರು. ಇದಕ್ಕೂ ಮುಂಚೆ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಶಾಸಕ ರವಿ ಗಾಣಿಗ ಸೋಮವಾರ ಎತ್ತಿನ ಬಂಡಿಯಲ್ಲಿ ಬೆಂಗಳೂರಿನ ವಿಧಾನಸೌಧಕ್ಕೆ ಆಗಮಿಸುವ ಮೂಲಕ ಗಮನ ಸೆಳೆದರು.

# ನೇಮಕ ಆದೇಶ ರದ್ದು

(5ನೇ ಪುಟದಿಂದ) ಸಲ್ಲಿಸಿದ್ದರು. ಈ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಪೀಠವು, ಮಠಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂದು ಸ್ಪಷ್ಟಪಡಿಸಿದೆ.


ಮಠ ಮತ್ತು ಶೈಕ್ಷಣಿಕ ಆಡಳಿತ ನಿರ್ವಹಣೆಗೆ ಪರ್ಯಾಯ ಯೋಜನೆ ರೂಪಿಸಲು ಮಠದ ಭಕ್ತರು ಹಾಗೂ ಲಿಂಗಾಯತ ಸಮುದಾಯದ ಪ್ರಮುಖರು ನಿರ್ಧರಿಸಬಹುದು. ಈ ನಿಟ್ಟಿನಲ್ಲಿ ನಾಲ್ಕು ವಾರಗಳ ಕಾಲ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿ ಮುಂದುವರಿಯಬಹುದು ಎಂದು ಹೇಳಿದೆ.

## ತೀರ್ಪು ಸ್ವಾಗತಾರ್ಹ



ಚಿತ್ರದುರ್ಗ, ಮೇ 22- ಮುರುಘಾ ಮಠಕ್ಕೆ ಆಡಳಿತಾಧಿ ಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿರುವುದು ಸ್ವಾಗತಾರ್ಹ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದ್ದಾರೆ. ನ್ಯಾಯಾಲಯದ ತೀರ್ಪನ್ನು ಶ್ರೀಮಠದ ಎಲ್ಲಾ ಭಕ್ತರು, ನೌಕರರ ಪರವಾಗಿ ಸ್ವಾಗತಿಸುತ್ತೇವೆ. ಗೆಲುವು ಸಿಗುತ್ತದೆಂಬ ವಿಶ್ವಾಸ ನಮಗೆ ಇತ್ತು. ಅಂತೆಯೇ ಇಂದು ನ್ಯಾಯಾಲಯ ನಿರ್ಣಯ ನೀಡಿದೆ ಎಂದು ಬಸವ ಪ್ರಭು ಸ್ವಾಮೀಜಿ ಹೇಳಿದ್ದಾರೆ.

# ನಟ ಶರತ್ ಬಾಬು ಇನ್ನಿಲ್ಲ



ಹೈದರಾಬಾದ್, ಮೇ 22 – ಹಿರಿಯ ನಟ ಶರತ್ ಬಾಬು ಅವರು ಹೈದರಾಬಾದ್‌ನಲ್ಲಿ ನಿಧನರಾಗಿದ್ದಾರೆ. ಕಳೆದ ಕೆಲ ದಿನಗಳಿಂದ ಅವರು ಅನಾರೋಗ್ಯ ಪೀಡಿತರಾಗಿದ್ದರು.

ಸುಮಾರು ಐದು ದಶಕಗಳಿಂದ ಚಿತ್ರರಂಗದಲ್ಲಿದ್ದ ಅವರು, 250ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಅವರ ಮಾತೃಭಾಷೆ ತೆಲುಗು ಆಗಿದ್ದರೂ, ತಮಿಳು ಹಾಗೂ ಕನ್ನಡ ಚಿತ್ರಗಳಲ್ಲೂ ನಟಿಸಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶರತ್ ಬಾಬು, ಬಹು ಅಂಗ ವೈಫಲ್ಯದ ಕಾರಣದಿಂದ ಕೊನೆಯುಸಿರೆಳೆದಿದ್ದಾರೆ. ಕಳೆದ ಏಪ್ರಿಲ್ 20ರಂದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಕೆ. ಬಾಲಚಂದರ್ ನಿರ್ದೇಶನದ 'ಇದಿ ಕಥಾ ಕಾದು' ತೆಲುಗು ಚಿತ್ರ ಅವರಿಗೆ ಆರಂಭದ ದಿನಗಳಲ್ಲಿ ಹೆಸರು ತಂದು ಕೊಟ್ಟಿತ್ತು. 'ಸಾತಕೊಕ ಚಿಲಕ', 'ಸಾಗರ ಸಂಗಮಂ', 'ಸ್ವಾತಿ ಮುತ್ಯಂ' ಹಾಗೂ 'ಆಪತ್ಬಾಂದುವುಡು' ಅವರಿಗೆ ಹೆಸರು ತಂದುಕೊಟ್ಟ ಚಿತ್ರಗಳು.

1970ರಲ್ಲಿ 'ಪಟ್ಟಣ ಪ್ರವೇಶಂ' ಚಿತ್ರದ ಮೂಲಕ ಅವರು ತಮಿಳು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದರು. 'ಅಣ್ಣಾಮಲೈ' ಹಾಗೂ 'ಮುತ್ತು' ಚಿತ್ರಗಳು ಅವರಿಗೆ ಜನಪ್ರಿಯತೆ ತಂದಿದ್ದವು. ಕನ್ನಡದಲ್ಲಿ 'ಅಮೃತವರ್ಷಿಣಿ' ಅವರಿಗೆ ಅಪಾರ ಹೆಸರು ತಂದುಕೊಟ್ಟ ಚಿತ್ರ.

# ಶೇ.55 ಮಾನಸಿಕ ವಿಕಲಚೇತನರಿಗೆ ಎಂಬಿಬಿಎಸ್ ಮೀಸಲಾತಿ

(5ನೇ ಪುಟದಿಂದ) ರಚಿಸುವಂತೆ ರಾಷ್ಟ್ರೀಯ ವೈದ್ಯಕೀಯ ಮಂಡಳಿಗೆ ತಿಳಿಸಲಾಗಿದೆ.

ವಿಕಲಚೇತನರ ಹಕ್ಕುಗಳ ಕಾಯ್ದೆಯ ಅನ್ವಯ ತಮಗೆ ಎಂ.ಬಿ.ಬಿ.ಎಸ್. ಪ್ರವೇಶದಲ್ಲಿ ಮೀಸಲಾತಿ ನೀಡಿಲ್ಲ ಎಂದು ವಿಶಾಲ್ ಗುಪ್ತ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಶೇ.55ರಷ್ಟು ಮಾನಸಿಕ ವಿಕಲಚೇತನ ಇರುವ ಕಾರಣ ವೈದ್ಯಕೀಯ ಕಾಲೇಜು ಪ್ರವೇಶಕ್ಕೆ ಅರ್ಹತೆ ಇಲ್ಲ ಎಂದು ತಿಳಿಸಲಾಗಿದೆ ಎಂದು ಗುಪ್ತ ಆಕ್ಷೇಪಿಸಿದ್ದರು.

ಕಾಯ್ದೆಯ ಅನ್ವಯ ಶೇ.40ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿರುವವರು ಪ್ರವೇಶದಲ್ಲಿ ಮೀಸಲಾತಿ ಪಡೆಯಲಾಗದು. ಆದರೆ, ಈ ಕಾರಣಕ್ಕಾಗಿ ಕಲಿಕಾ ಸಮಸ್ಯೆ ಹಾಗೂ ಆಟಿಸಂ ಸಮಸ್ಯೆ ಎದುರಿಸುತ್ತಿರುವವರನ್ನು ನಿರ್ಲಕ್ಷ್ಯದಿಂದ ಕಾಣಬಾರದು ಮತ್ತು ಮೀಸಲಾತಿ ಲಾಭ ನಿರಾಕರಿಸಬಾರದು ಎಂದು ಗುಪ್ತ ಪರ ವಕೀಲ ಗೌರವ್ ಕುಮಾರ್ ಬನ್ಸಾಲ್ ಅರ್ಜಿ ದಾಖಲಿಸಿದ್ದರು.

# ಸಿದ್ದರಾಮಯ್ಯ ಅವರನ್ನು ಟೀಕಿಸಿದ ಶಿಕ್ಷಕ ಅಮಾನತ್ತು

(5ನೇ ಪುಟದಿಂದ) ಧರ್ಮಸಿಂಗ್ 15,635 ಕೋಟಿ, ಎಚ್.ಡಿ. ಕುಮಾರಸ್ವಾಮಿ 3,545 ಕೋಟಿ, ಬಿ.ಎಸ್. ಯಡಿಯೂರಪ್ಪ 25,653 ಕೋಟಿ, ಸದಾನಂದಗೌಡ 9,464 ಕೋಟಿ, ಜಗದೀಶ ಶೆಟ್ಟರ್ 13,464 ಕೋಟಿ, ಸಿದ್ದರಾಮಯ್ಯ 2,42,000 ಕೋಟಿ ಸಾಲ ಮಾಡಿದರು.

ಎಸ್.ಎಂ. ಕೃಷ್ಣ ಅವಧಿಯಿಂದ ಶೆಟ್ಟರ್‌ವರೆಗೆ ಮಾಡಿದ ಒಟ್ಟು ಸಾಲ 71,331 ಕೋಟಿ, ಸಿದ್ದರಾಮಯ್ಯ ಅವರು ಮಾಡಿದ ಸಾಲ 2,42,000 ಕೋಟಿ. ಹೀಗಿರುವಾಗ ಬಿಟ್ಟಿ ಭಾಗ್ಯ ಕೊಡದೆ ಇನ್ನೇನು ಎಂದು ಬರಹದಲ್ಲಿ ಟೀಕಿಸಿದ್ದರು. ಈ ಮಾಹಿತಿಯನ್ನು ವಾಟ್ಸ್‌ಆಪ್ ಗ್ರೂಪ್‌ಗಳಿಗೂ ಶೇರ್ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಂತಮೂರ್ತಿ ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಅಮಾನತ್ತು ಮಾಡಿದ್ದಾರೆ.


# ಕಾಮಗಾರಿಗಳ ಅನುದಾನ ಬಿಡುಗಡೆಗೆ ತಡೆ

ಬೆಂಗಳೂರು, ಮೇ 22 - ಈ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಅವಧಿಯ ಎಲ್ಲಾ ಕಾಮಗಾರಿಗಳ ಅನುದಾನ ಬಿಡುಗಡೆಗೆ ಸಿದ್ದರಾಮಯ್ಯ ನೇತೃತ್ವದ ನೂತನ ಕಾಂಗ್ರೆಸ್ ಸರ್ಕಾರ ತಡೆ ನೀಡಿದೆ.

ಎಲ್ಲಾ ಇಲಾಖೆಗಳು, ನಿಗಮ-ಮಂಡಳಿ, ಪ್ರಾಧಿಕಾರಗಳ ಕಾಮಗಾರಿಗೆ ಸಂಬಂಧಿಸಿದ ಹಣ ಬಿಡುಗಡೆ, ಪಾವತಿಗೆ ತಕ್ಷಣದಿಂದ ತಡೆ ನೀಡಲಾಗಿದೆ. ಈ ಕುರಿತು ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಆರ್ಥಿಕ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಅಲ್ಲದೇ, ಇನ್ನಷ್ಟೇ ಆರಂಭವಾಗಬೇಕಿರುವ ಕಾಮಗಾರಿಗಳನ್ನೂ ತಡೆಹಿಡಿಯುವಂತೆ ಆದೇಶಿಸಲಾಗಿದೆ.

# ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.


## ಬೇಕಾಗಿದ್ದಾರೆ

PIAGGIO apé

ಅಪೆ ಆಟೋ Diesel, LPG, CNG ಪ್ಯಾಸೆಂಜರ್, ಗೂಡ್ಸ್ ಅಪೆ ಆಟೋ ಎಲ್ ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು

ಸೇಲ್ಸ್ ಎಕ್ಸಿಕ್ಯೂಟಿವ್ಸ್-6
ಸೇಲ್ಸ್ ಮ್ಯಾನೇಜರ್-1
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)

ವಿದ್ಯಾರ್ಹತೆ: SSLC to Degree. ಆಕರ್ಷಕ ಸಂಬಳ + Incentive+TA, DA.

ವರ್ಕ್‌ಶಾಪ್ ಸೂಪರ್‌ವೈಸರ್-2 ಹೊಸಬರಿಗೂ ಕೂಡ ಆದ್ಯತೆ ಇದೆ

ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:

ಗಣೇಶ ಮೋಟಾರ್ ಶೆಲ್ ಪೆಟ್ರೋಲ್ ಬಂಕ್ ಎದುರು, ಶೃತಿ ಮೋಟಾರ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ-6. Mob: 84949 43963



## ಕೆ.ವಿ.ಎಸ್. ಹೈಸ್ಕೂಲ್

ಬಿ.ಎಸ್.ವಿ.ಜೆ ಸ್ಕೂಲ್ ಪ್ರಿಮೈಸಸ್ (Premium)

ಪಿ.ಜೆ. ಬಡಾವಣೆ, 4ನೇ ಮುಖ್ಯ ರಸ್ತೆ, ದಾವಣಗೆರೆ-02.

2022-23ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ

ವಿಶಿಷ್ಟ ದರ್ಜೆ : 08 | ಪ್ರಥಮ ದರ್ಜೆ : 14 | ದ್ವಿತೀಯ ದರ್ಜೆ : 06

ಅತ್ಯುತ್ತಮ ಅಂಕಗಳೊಂದಿಗೆ ಹೆಚ್ಚಿನ ಫಲಿತಾಂಶವನ್ನು ತಂದುಕೊಟ್ಟು, ಶಾಲೆಗೆ ಕೀರ್ತಿ ತಂದ ಎಲ್ಲಾ ವಿದ್ಯಾರ್ಥಿಗಳಿಗೆ ನಮ್ಮ ಎಸ್.ಕೆ.ಪಿ. ವಿದ್ಯಾಪೀಠದ ಆಡಳಿತ, ಸದಸ್ಯರು ಹಾಗೂ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

REQUIREMENT TEACHERS

BA, B.Ed - Kannada major - 01
BA, B.Ed - Social Science - 01
B.P.Ed - PE Teacher - 01

2023-24 ನೇ ಸಾಲಿನ ಪ್ಲೇ ಗ್ರೂಪ್‌ನಿಂದ 10 ನೇ ತರಗತಿಯವರೆಗೆ ಪ್ರವೇಶ ಪ್ರಾರಂಭವಾಗಿದೆ.

ಸಂಪರ್ಕಿಸಿ. 91132 58221, 81978 58611



## ಜನ್ಮ ದಿನದ ಶುಭಾಶಯಗಳು




ಇಂದು ತಮ್ಮ 50ನೇ ವರ್ಷದ ಜನ್ಮ ದಿನ ಆಚರಿಸಿಕೊಳ್ಳುತ್ತಿರುವ ಕಾಂಗ್ರೆಸ್ ಮುಖಂಡರೂ ಆದ ನನ್ನ ಆತ್ಮೀಯ ಗೆಳೆಯ

ಶ್ರೀ ಎಸ್.ಜಿ. ವೇದಮೂರ್ತಿ ಶಾಮನೂರು

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು...

ಶುಭ ಕೋರುವವರು :

ಕೆ.ಎ. ರಾಜಶೇಖರ್ ಮತ್ತು ಫ್ಯಾಮಿಲಿ

ಪವನ್ ಡಿಜಿಟಲ್ ಜೆರಾಕ್ಸ್

ಬಿ.ಐ.ಇ.ಟಿ. ರೋಡ್, ದಾವಣಗೆರೆ.





## ಸಾರ್ವಜನಿಕರ ಗಮನಕ್ಕೆ

ದಾವಣಗೆರೆ ಬಾರ್‌ಲೈನ್ ರಸ್ತೆಯ ನಂ. 173/1ರ ನಿವಾಸಿ **ದಿವಂಗತ ಹಮೀದುರ್ ರಹಮಾನ್** ಇವರ ವಾರಸುದಾರರಾದ **ಶ್ರೀ ಡಿ.ಹಫೀಜುರ್ ರಹಮಾನ್ ಹಾಗೂ ಅವರ ಸಹೋದರ, ಸಹೋದರಿಯರ** ಪರವಾಗಿ ಈ ಮೂಲಕ ಸಾರ್ವಜನಿಕವಾಗಿ ಪ್ರಚುರಪಡಿಸುವುದೇನೆಂದರೆ,

ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿಗೆ ಮೇಲ್ಕಾಣಿಸಿದ ನನ್ನ ಕಕ್ಷಿದಾರರು ಕಾನೂನುಬದ್ಧ ಮಾಲೀಕರು, ಸ್ವಾಧೀನದಾರರು ಆಗಿದ್ದಾರೆ. ಆದರೆ ಡೋರ್ ನಂ.49, ಕರೂರು, ದಾವಣಗೆರೆ ವಾಸಿಯಾದ ಸೈಯದ್ ತಾಹೀರುದ್ದೀನ್ ಬಿನ್ ಸೈಯದ್ ಜಹೀರುದ್ದೀನ್ ಎಂಬುವರು ಸದರಿ ನಿವೇಶನವನ್ನು ಹಾರನಹಳ್ಳಿ ರಾಮಲಿಂಗೇಶ್ವರ ಮಠದ ಶ್ರೀ ನೀಲಕಂಠ ಸಾರಂಗ ದೇಶೀಕೇಂದ್ರ ಮಹಾಸ್ವಾಮಿಗಳಿಂದ ಖರೀದಿಸಿ, ಕ್ರಯ ಕರಾರು ಪತ್ರ ಮಾಡಿಕೊಂಡಿದ್ದೇನೆಂದು ಹೇಳಿ, ಸದರಿ ಸ್ವತ್ತಿನಲ್ಲಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ರಚಿಸತೊಡಗಿದ್ದರಿಂದ ಅವರ ವಿರುದ್ಧ ಹೂಡಿರುವ ಓಎಸ್. ಸಂಖ್ಯೆ 01/2023ರ ದಾವೆಯಲ್ಲಿ ದಾವಣಗೆರೆಯ ರಜಾ ಕಾಲದ ನ್ಯಾಯಾಲಯವಾದ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಿನಾಂಕ:17/05/2023 ರಂದು ಪ್ರತಿವಾದಿಯವರಾಗಲಿ ಅವರ ಸೇವಕರು, ಸಹಚರರು ಮತ್ಯಾರೆ ಆಗಲೀ ಷೆಡ್ಯೂಲ್ ಸ್ವತ್ತಿನಲ್ಲಿನ ನನ್ನ ಕಕ್ಷಿದಾರರ ಶಾಂತಿಯುತ ಸ್ವಾಧೀನಾನುಭವಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿಪಡಿಸದಂತೆ, ಪ್ರತಿವಾದಿಯರ ವಿರುದ್ಧ ನಿರ್ಬಂಧಕಾಜ್ಞೆ ಹೊರಡಿಸಿದೆ. ಆದ್ದರಿಂದ ಷೆಡ್ಯೂಲ್ ಸ್ವತ್ತಿನ ನಿವೇಶನಗಳನ್ನು ಯಾರಾದರೂ ಖರೀದಿ, ಅಡಮಾನ ಇತ್ಯಾದಿ ವಹಿವಾಟು ಮಾಡಿಕೊಂಡರೆ ಅದಕ್ಕೆ ನನ್ನ ಕಕ್ಷಿದಾರರು ಜವಾಬ್ದಾರರಲ್ಲ ಎಂದು ಈ ಮೂಲಕ ತಿಳುವಳಿಕೆ ನೀಡುತ್ತಿದ್ದೇನೆ.

**ಷೆಡ್ಯೂಲ್**

ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದಾವಣಗೆರೆ ಗ್ರಾಮದ ಸ.ನಂ.141ರ 1.00 ಎಕರೆ (ಒಂದು ಎಕರೆ), ಆಕಾರ ರೂ. 2 ಉಳ್ಳ ಕೃಷಿ ಜಮೀನು.

ಚಕ್ಕುಬಂದಿ : **ಪೂರ್ವಕ್ಕೆ** - ಎಸ್.ಜೆ.ಎಂ. ನಗರಕ್ಕೆ ಹೋಗುವ ದಾರಿ. **ಪಶ್ಚಿಮಕ್ಕೆ**- ಇದೆ ಜಮೀನಿನ ಪೈಕಿ ಉಳಿದ ಜಮೀನು, **ಉತ್ತರಕ್ಕೆ**- ರಿ.ಸ.ನಂ.142ರ ಜಮೀನು, **ದಕ್ಷಿಣಕ್ಕೆ**- ಇದೆ ಪೈಕಿ ಉಳಿದ ಜಮೀನು.

**ದಿನಾಂಕ: 22-05-2023**
**ಸ್ಥಳ: ದಾವಣಗೆರೆ**

ಸಹಿ/- ಬಿ.ಎಂ.ಸಿದ್ದಲಿಂಗಸ್ವಾಮಿ, ವಕೀಲರು, ಎಂ.ಎ., ಎಲ್.ಎಲ್.ಬಿ., ಎಂ.ಫಿಲ್ ರೋಲ್ ನಂ. KAR/3361/10, ಹರಿಹರ 577601 ದಾವಣಗೆರೆ ಜಿಲ್ಲೆ. ಮೊ : 9343855614



## ಹೃತ್ಪೂರ್ವಕ ಕೃತಜ್ಞತೆಗಳು



ಎ.ಎಸ್. ನಯನ್‌ಕುಮಾರ್
ಅಧ್ಯಕ್ಷರು, ಈಚಘಟ್ಟ.



ಮೇಘರಾಜ್ ಬಿ.
ಉಪಾಧ್ಯಕ್ಷರು, ಈಚಘಟ್ಟ.

ಈಚಘಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಈಚಘಟ್ಟ, ದಾವಣಗೆರೆ ತಾ॥ ಇದರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಾಗಿ ದಿನಾಂಕ 22.05.2023 ರಂದು ನಡೆದ ಚುನಾವಣೆಯಲ್ಲಿ ನಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಚುನಾವಣಾಧಿಕಾರಿಗಳಾದ ಶ್ರೀಮತಿ ಭಾಗ್ಯ ಶ್ರೀ ಎಸ್. ಪಾಟೀಲ್, ಹಿರಿಯ ನಿರೀಕ್ಷಕರು, ಉಪನಿಬಂಧಕರ ಕಛೇರಿ, ದಾವಣಗೆರೆ ಇವರಿಗೂ ಹಾಗೂ ಸಿಇಓ ಅರ್ಜುನ್ ನಾಯ್ಕ್‌ರವರಿಗೂ, ಶ್ರೀ ಎ.ಬಿ. ಉದಯ್‌ಕುಮಾರ್, ಮಾಜಿ ಅಧ್ಯಕ್ಷರು ಹಾಗೂ ಶ್ರೀ ಬಿ. ಲಿಂಗಮೂರ್ತಿ, ಮಾಜಿ ಉಪಾಧ್ಯಕ್ಷರು

ನಿರ್ದೇಶಕರುಗಳಾದ : ಶ್ರೀ ಟಿ.ಜಿ. ಜೀವನ್‌ಪ್ರಕಾಶ್, ಧರ್ಮೇಂದ್ರ ನಾಯ್ಕ್, ಹೆಚ್.ಜಿ. ಮಲ್ಲಿಕಾರ್ಜುನ್, ವಿ.ಆರ್. ಶಿವಮೂರ್ತಿ, ಹೆಚ್.ಶಾಂತಕುಮಾರ್, ಶ್ರೀಮತಿ ಶಾರದಮ್ಮ ಶ್ರೀಮತಿ ಲತಾ, ಎಸ್.ಕೆ. ಜಯ್ಯಪ್ಪ, ಪುಟ್ಟನಾಯ್ಕ ಬಿ., ಕ್ಷೇತ್ರಾಧಿಕಾರಿ ಡಿಸಿಸಿಬಿ ಬ್ಯಾಂಕ್ ಹಾಗೂ ಈಚಘಟ್ಟ, ಹನುಮನಹಳ್ಳಿ, ಹಿರೇತೊಗಲೇರಿ, ಚಿಕ್ಕತೊಗಲೇರಿ, ಕಳವೂರು ಗ್ರಾಮಗಳ ಎಲ್ಲಾ ಹಿರಿಯರಿಗೂ, ಎಲ್ಲಾ ಸದಸ್ಯರಿಗೂ ಹೃತ್ಪೂರ್ವಕ ಕೃತಜ್ಞತೆಗಳು.








ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಸಿದ್ದರಾಮಯ್ಯನವರ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವರಾಗಿ ಪದಗ್ರಹಣ ಮಾಡಿರುವ ನಾಯಕ ಸಮಾಜದ

ಶ್ರೀ ಸತೀಶ್ ಜಾರಕಿಹೊಳಿ

ಅವರಿಗೂ ಹಾಗೂ ನಾಯಕ ಸಮಾಜದಿಂದ ಆಯ್ಕೆಯಾಗಿರುವ ಎಲ್ಲಾ ಶಾಸಕರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ತಮ್ಮ ಅಧಿಕಾರವಧಿಯಲ್ಲಿ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಹೊಂದಲೆಂದು ಶುಭ ಹಾರೈಸುತ್ತೇವೆ.

- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ
- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ದಾವಣಗೆರೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ
- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ನಾಯಕ ವಿದ್ಯಾರ್ಥಿ ನಿಲಯ
- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಜಿಲ್ಲಾ, ವಾಲ್ಮೀಕಿ ನಾಯಕ ಯುವ ಘಟಕ
- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಮಹಿಳಾ ಸಮಾಜ
- ಮಹರ್ಷಿ ವಾಲ್ಮೀಕಿ ಗೆಜೆಟೆಡ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕ ದಾವಣಗೆರೆ
- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕ, ದಾವಣಗೆರೆ.
- ವಾಲ್ಮೀಕಿ ವಕೀಲರ ವೇದಿಕೆಯ ಎಲ್ಲಾ ವಕೀಲರು, ದಾವಣಗೆರೆ.


50
Birthday
ಹುಟ್ಟುಹಬ್ಬದ ಶುಭಾಶಯಗಳು
ತಮ್ಮ ಸಾರ್ಥಕ ಜೀವನದ 49 ವಸಂತಗಳನ್ನು ಪೂರೈಸಿ,
ಇಂದು 50ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ
30 ವರ್ಷಗಳಿಂದಲೂ ಸಹೋದರರಂತಿರುವ
ನನ್ನ ಆತ್ಮೀಯ ಮಿತ್ರ
ಶ್ರೀ ಎಸ್.ಜಿ. ವೇದಮೂರ್ತಿ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು
ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.
ನಗುತ ನಗುತ ಬಾಳು ನೀನು ನೂರು ವರುಷಾ
ಎಂದು ಹೀಗೆ ಇರಲಿ ಇರಲಿ ಹರುಷ ಹರುಷಾ
ಶ್ರೀ ಮಂಜುನಾಥ್ ಎಸ್. ಶಿರಗನಹಳ್ಳಿ
ಮತ್ತು ಶ್ರೀಮತಿ ರೇಖಾ ಮಂಜುನಾಥ್
ಚಿ. ಎಂ. ಸಿದ್ದೇಶ್, ಚಿ. ಎಂ. ಪುನೀತ್


50
Happy Birthday
HAPPy BIRTHDAY
ಜನ್ಮದಿನದಶುಭಾಶಯಗಳು
ಇಂದು ತಮ್ಮ 50 ವರ್ಷದ ಸಂಭ್ರಮದಲ್ಲಿರುವ
ಶ್ರೀ ಎಸ್.ಜಿ. ವೇದಮೂರ್ತಿ
ಶಾಮನೂರು
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ನಗು ತುಂಬಿದ ಜೀವನ ತಮ್ಮದಾಗಲಿ ಎಂದು ಶುಭ ಹಾರೈಸುವ...
✦ ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಗೌಡ್ರು ಶಿವಮೂರ್ತೆಪ್ಪ, ಮುಚ್ಚನೂರು.
✦ ಶ್ರೀಮತಿ ಅಶ್ವಿನಿ ಮತ್ತು ಶ್ರೀ ಜಿ.ಎಸ್. ಸತೀಶ್, ಚಿ. ಸಮರ್ಥ್ ಜಿ.ಎಸ್.
✦ ಶ್ರೀಮತಿ ದೀಪಾ ಮತ್ತು ಶ್ರೀ ಜಿ.ಎಸ್. ಹರೀಶ್, ಚಿ. ವೈಭವ್ ಜಿ.ಹೆಚ್.
ಗೌಡ್ರು ವಂಶಸ್ಥರು, ಮುಚ್ಚನೂರು ಹಾಗೂ ದಿ. ನಂಜಮ್ಮನವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಶಾಮನೂರು.